# ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996

ಪ್ರಕರಣಗಳ ಕ್ರಮಪಟ್ಟಿ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

**ಅಧ್ಯಾಯ I**

**ಪ್ರಾರಂಭಿಕ**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.
2. ಪರಿಭಾಷೆಗಳು.
3. ಘೋಷಣೆ.

**ಅಧ್ಯಾಯ II**

**ಬೆಂಗಳೂರು ಅರಮನೆಯ ವರ್ಗಾವಣೆ ಮತ್ತು ನಿಹಿತಗೊಳ್ಳುವಿಕೆ**

4. ರಾಜ್ಯ ಸರ್ಕಾರಕ್ಕೆ ಅರಮನೆಯನ್ನು ವರ್ಗಾಯಿಸುವುದು ಮತ್ತು ಅದರಲ್ಲಿ ನಿಹಿತಗೊಳಿಸುವುದು.
5. ನಿಹಿತವಾಗುವುದರ ಸಾಮಾನ್ಯ ಪರಿಣಾಮ.
6. ಕೆಲವು ಪೂರ್ವ ಹೊಣೆಗಾರಿಕೆಗಳಿಗೆ ಕಾನೂನುಸಮ್ಮತ ಪ್ರತಿನಿಧಿ ಅಥವಾ ವಾರಸುದಾರ ಅಥವಾ ಇತರ ಹಿತಾಸಕ್ತ ವ್ಯಕ್ತಿಯು ಬದ್ಧನಾಗುವುದು.
7. ಅರಮನೆಯು ಮಂಡಲಿಯಲ್ಲಿ ನಿಹಿತಗೊಳ್ಳುವ ಬಗ್ಗೆ ರಾಜ್ಯ ಸರ್ಕಾರದ ನಿರ್ದೇಶನ.
8. ಕಾನೂನುಸಮ್ಮತ ಪ್ರತಿನಿಧಿಗಳಿಗೆ ಅಥವಾ ವಾರಸುದಾರರಿಗೆ ಅಥವಾ ಇತರ ಹಿತಾಸಕ್ತ ವ್ಯಕ್ತಿಗಳಿಗೆ ನೀಡಬೇಕಾದ ಮೊಬಲಗು.
9. ಹೆಚ್ಚಿನ ಮೊಬಲಗುಗಳ ಸಂದಾಯ.

**ಅಧ್ಯಾಯ III**

**ಅರಮನೆಯ ನಿರ್ವಹಣೆ**

10. ಅರಮನೆಯ ನಿರ್ವಹಣೆ.
11. ಅರಮನೆಯ ನಿರ್ವಹಣೆಯ ಪ್ರಭಾರದಲ್ಲಿರುವ ವ್ಯಕ್ತಿಗಳ ಕರ್ತವ್ಯಗಳು.
12. ತಮ್ಮ ಸ್ವಾಧೀನದಲ್ಲಿರುವ ಆಸ್ತಿಗಳ ಲೆಕ್ಕ ಕೊಡಲು ವ್ಯಕ್ತಿಗಳ ಕರ್ತವ್ಯ.

**ಅಧ್ಯಾಯ IV**

**ಹಣ ಸಂದಾಯದ ಕಮೀಷನರು**

13. ಹಣ ಸಂದಾಯದ ಕಮೀಷನರ ನೇಮಕ.
14. ಕಮೀಷನರಿಗೆ ರಾಜ್ಯ ಸರ್ಕಾರದಿಂದ ಹಣ ಸಂದಾಯ.
15. ರಾಜ್ಯ ಸರ್ಕಾರದ ಮತ್ತು ಮಂಡಲಿಯ ನಿರ್ದಿಷ್ಟ ಅಧಿಕಾರಗಳು.
16. ಕ್ಲೇಮುಗಳನ್ನು ಕಮೀಷನರಿಗೆ ಮಾಡತಕ್ಕದ್ದು.
17. ಕ್ಲೇಮುಗಳ ಆದ್ಯತೆ.
18. ಕ್ಲೇಮುಗಳ ಪರಿಶೀಲನೆ.
19. ಕ್ಲೇಮುಗಳ ಅಂಗೀಕಾರ ಅಥವಾ ನಿರಾಕರಣೆ.
20. ಕ್ಲೇಮುದಾರರಿಗೆ ಕಮಿಷನರಿಂದ ಮೊಬಲಗಿನ ಹಂಚಿಕೆ.

21. ಹಂಚಿಕೆ ಮಾಡದ ಅಥವಾ ಕ್ಲೇಮು ಮಾಡದ ಮೊಬಲಗಿನ ಹಣವನ್ನು ಸಾಮಾನ್ಯ ಕಂದಾಯ ಖಾತೆಗೆ ಜಮೆ ಮಾಡತಕ್ಕದ್ದು.

## ಅಧ್ಯಾಯ V

### ಟ್ರಸ್ಟಿಗಳ ಮಂಡಲಿ

22. ಟ್ರಸ್ಟಿಗಳ ಮಂಡಲಿ.
23. ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು.
24. ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳ ನೇಮಕ.
25. ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು.
26. ಮಂಡಲಿಯಿಂದ ಅಥವಾ ಮಂಡಲಿಯ ವಿರುದ್ಧ ಹೂಡಲಾಗುವ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳು.
27. ನಿಧಿ.
28. ಸಾಲ ತೆಗೆದುಕೊಳ್ಳಲು ಅಧಿಕಾರ.
29. ನಿಧಿಯ ಬಳಕೆ.
30. ಲೆಕ್ಕಪರಿಶೋಧನೆ.
31. ಬಜೆಟ್.

## ಅಧ್ಯಾಯ VI

### ಸಂಕೀರ್ಣ

32. ಅಧಿನಿಯಮವು ಅಧ್ಯಾರೋಹಿ ಪರಿಣಾಮವನ್ನು ಹೊಂದಿರುವುದು.
33. ಮಂಡಲಿಯಿಂದ ಸ್ಥಿರೀಕರಿಸಿದ ಹೊರತು ಕರಾರು ಪರಿಣಾಮಕಾರಿಯಾಗಿರುವುದು ನಿಂತುಹೋಗುವುದು.
34. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.
35. ದಂಡನೆಗಳು.
36. ಕಂಪನಿಗಳಿಂದ ಅಪರಾಧಗಳು.
37. ಪರಿಷ್ಕರಣೆ.
38. ನಿಯಮಗಳ ರಚನಾಧಿಕಾರ.
39. ತೊಂದರೆಗಳನ್ನು ನಿವಾರಿಸುವ ಅಧಿಕಾರ.
40. ಭೂ ಆರ್ಜನೆ ಅಧಿನಿಯಮ, 1894ರ ಅಡಿಯಲ್ಲಿನ ವ್ಯವಹರಣೆಗಳನ್ನು ಕೊನೆಗೊಳಿಸುವುದು.

ಅನುಸೂಚಿ I

ಅನುಸೂಚಿ II

****

### ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**1996ರ ಅಧಿನಿಯಮ ಸಂಖ್ಯೆ 18.–** ಕರ್ನಾಟಕದ ವಿಶಿಷ್ಟ ಐತಿಹಾಸಿಕ ವಾಸ್ತು ಶಿಲ್ಪ ಪರಂಪರೆಯ ಪ್ರತೀಕವಾದ ಬೆಂಗಳೂರು ಅರಮನೆ ಎಂದು ಪ್ರಖ್ಯಾತವಾಗಿರುವ ಬೆಂಗಳೂರಿನಲ್ಲಿರುವ ಅರಮನೆಯು, ಇಲ್ಲಿರುವ ಬೇರಾವ ಅರಮನೆಗಳಿಗೂ ಇರದ ತನ್ನ ಸುತ್ತಣ ಸುಂದರ ಪರಿಸರದಿಂದ ಮನೋಹರವಾಗಿ ಗಾಂಭೀರ್ಯತೆಯಿಂದ ಕೂಡಿದ್ದು ಸಾರ್ವಜನಿಕರ ಹಿತದೃಷ್ಟಿಯಿಂದ ಇದನ್ನು ಒಂದು ಶಾಶ್ವತ ಸ್ಮಾರಕವಾಗಿ ಸಂರಕ್ಷಿಸಲು ಮತ್ತು ಅರಮನೆಯ ಸುತ್ತಲಿನ ಖಾಲಿ ಜಾಗವನ್ನು ಸಾರ್ವಜನಿಕ ಉದ್ದೇಶಕ್ಕಾಗಿ, ಸಸ್ಯ ಸಂಗ್ರಹಾಲಯ, ತೋಟಗಾರಿಕಾ ಉದ್ಯಾನ ಹಾಗೂ

ವೃಕ್ಷೋದ್ಯಾನವನ್ನಾಗಿಯೇ ಅಭಿವೃದ್ಧಿಗೊಳಿಸಲು ಹಾಗೂ ಬೆಂಗಳೂರು ನಗರವು ಅತ್ಯಂತ ವೇಗವಾಗಿ ಬೆಳೆಯುತ್ತಿದ್ದು ಶುದ್ಧ ಗಾಳಿಯಿರುವ ಬಯಲು ಮತ್ತು ಉದ್ಯಾನವನ ಪ್ರದೇಶಗಳ ಕೊರತೆಯಿಂದ ಈಗಾಗಲೇ ಸಾಕಷ್ಟು ದುಷ್ಪರಿಣಾಮಕ್ಕೊಳಗಾಗಿರುವ ಈ ನಗರದ ಜೀವಿ ಪರಿಸರದ ಅಗತ್ಯತೆಗಳನ್ನು ಪೂರೈಸಬಲ್ಲ ಏಕೈಕ ಅರಮನೆಯಾಗಿದೆ.

ಬೆಂಗಳೂರು ಅರಮನೆ ಮತ್ತು ಅದರ ಸುತ್ತಲಿನ ಖಾಲಿ ಜಾಗದ ಸಂರಕ್ಷಣೆ, ನಿರ್ವಹಣೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗಾಗಿ ಅದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕಾನೂನು ಮೂಲಕ ಆರ್ಜಿಸುವುದು ಮತ್ತು ವರ್ಗಾವಣೆ ಮಾಡುವುದು ಹಾಗೂ ಸದರಿ ಅರಮನೆಯು ಸರಕಾರದಲ್ಲಿ ನಿಹಿತವಾದ ನಂತರ ಅದರ ಆಡಳಿತ ಮತ್ತು ಮೇಲ್ವಿಚಾರಣೆಗಾಗಿ ಅದನ್ನು ಟ್ರಸ್ಟ್‌ಗಳ ಮಂಡಲಿಯಲ್ಲಿ ನಿಹಿತಗೊಳಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1996 ರ ವಿಧಾನ ಸಭಾ ವಿಧೇಯಕ ಸಂಖ್ಯೆ 9 ಕಡತ ಸಂಖ್ಯೆ ಸಂವ್ಯಶಾಇ 13 ಎಲ್‌ಜೆಎನ್ 96 ರಿಂದ ಪಡೆದದ್ದು.)

* * * *

**1996ರ ಕರ್ನಾಟಕ ಅಧಿನಿಯಮ ಸಂಖ್ಯೆ 18**

*(1996 ರ ನವೆಂಬರ್ ಹದಿನೆಂಟನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

**ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996**

*(1996 ರ ನವೆಂಬರ್ ಹದಿನೈದನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಪಡೆಯಲಾಗಿದೆ)*

**ಬೆಂಗಳೂರು ಅರಮನೆ ಮತ್ತು ಅದರ ಸುತ್ತಲಿನ ಖಾಲಿ ಜಾಗವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಆರ್ಜಿಸುವುದಕ್ಕೆ ಮತ್ತು ವರ್ಗಾವಣೆ ಮಾಡುವುದಕ್ಕೆ ಮತ್ತು ಅದರ ಸಂರಕ್ಷಣೆಗೆ ಹಾಗೂ ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.**

ಕರ್ನಾಟಕದ ವಿಶಿಷ್ಟ ಐತಿಹಾಸಿಕ ಹಾಗೂ ವಾಸ್ತುಶಿಲ್ಪ ಪರಂಪರೆಯ ಪ್ರತೀಕವಾದ, ಬೆಂಗಳೂರು ಅರಮನೆ ಎಂದು ಪ್ರಖ್ಯಾತವಾಗಿರುವ ಬೆಂಗಳೂರಿನಲ್ಲಿರುವ ಅರಮನೆಯು, ಬೆಂಗಳೂರಿನ ಬೇರಾವ ಅರಮನೆಗಳಿಗೂ ಇರದ ತನ್ನ ಸುತ್ತಣ ಸುಂದರ ಪರಿಸರದಿಂದ ಮನೋಹರವಾಗಿ ಗಾಂಭೀರ್ಯತೆಯಿಂದ ಕೂಡಿದ್ದು ಸಾರ್ವಜನಿಕರ ಹಿತದೃಷ್ಟಿಯಿಂದ ಇದನ್ನು ಒಂದು ಶಾಶ್ವತ ಸ್ಮಾರಕವಾಗಿ ಸಂರಕ್ಷಿಸಲು ಮತ್ತು ಅರಮನೆಯ ಸುತ್ತಲಿನ ಖಾಲಿ ಜಾಗವನ್ನು ಸಾರ್ವಜನಿಕ ಉದ್ದೇಶಕ್ಕಾಗಿ, ಸಸ್ಯ ಸಂಗ್ರಹಾಲಯ, ತೋಟಗಾರಿಕಾ ಉದ್ಯಾನ ಹಾಗೂ ವೃಕ್ಷೋದ್ಯಾನವನ್ನಾಗಿ ಅಭಿವೃದ್ಧಿಗೊಳಿಸಲು ಹಾಗೂ ಬೆಂಗಳೂರು ನಗರವು ಅತ್ಯಂತ ವೇಗವಾಗಿ ಬೆಳೆಯುತ್ತಿದ್ದು ಶುದ್ಧ ಗಾಳಿಯಿರುವ ಬಯಲು ಮತ್ತು ಉದ್ಯಾನವನ ಪ್ರದೇಶಗಳ ಕೊರತೆಯಿಂದ ಈಗಾಗಲೇ ಸಾಕಷ್ಟು ದುಷ್ಪರಿಣಾಮಕ್ಕೊಳಗಾಗಿರುವ ಈ ನಗರದ ಜೀವಿ ಪರಿಸರದ ಅಗತ್ಯತೆಗಳನ್ನು ಪೂರೈಸಬಲ್ಲ ಏಕೈಕ ಅರಮನೆಯಾಗಿರುವ ಇದನ್ನು ಕಾನೂನುಬದ್ಧವಾಗಿ ಆರ್ಜಿಸಲು ಮತ್ತು ವರ್ಗಾವಣೆ ಮಾಡಲು ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದಿಂದ ;

ನಗರ ಭೂ (ಮಿತಿ ಮತ್ತು ವಿನಿಯಮ) ಅಧಿನಿಯಮ, 1976 ರ ಅಡಿಯಲ್ಲಿನ ಸಕ್ಷಮ ಪ್ರಾಧಿಕಾರವು, ಬೆಂಗಳೂರು ಅರಮನೆ ಮತ್ತು ಅದರ ಸುತ್ತಲಿನ ಭೂಮಿಯು ಸದರಿ ಅಧಿನಿಯಮದ ವ್ಯಾಪ್ತಿಯೊಳಗೆ ಬರುವುದೆಂದು ತೀರ್ಮಾನ ನೀಡಿದ್ದು, ಬೆಂಗಳೂರು ಅರಮನೆಯ ಸುತ್ತಲಿನ ಭೂಮಿಯ ಗಣನೀಯ ಭಾಗವು ಹೆಚ್ಚುವರಿ ಭೂಮಿಯಾಗಿರುವುದರಿಂದ ಅದನ್ನು ರಾಜ್ಯ ಸರ್ಕಾರದ ಸ್ವಾಧೀನಕ್ಕೆ ಒಪ್ಪಿಸಬೇಕೆಂದು ಘೋಷಿಸಿ ಆದೇಶ ಹೊರಡಿಸಿರುವುದರಿಂದ ಮತ್ತು ಕರ್ನಾಟಕ ಅಪೀಲು ವಿಚಾರಣಾ ನ್ಯಾಯಾಧಿಕರಣಕ್ಕೆ ಮಾಡಲಾದ ಅಪೀಲಿನ ಸಂಬಂಧದಲ್ಲಿ ನ್ಯಾಯಾಧಿಕರಣವು ಸದರಿ ಆದೇಶವನ್ನು ಎತ್ತಿ ಹಿಡಿದಿರುವುದರಿಂದ;

ದಿವಂಗತ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಕಾನೂನುಸಮ್ಮತ ಪ್ರತಿನಿಧಿಗಳು, ವಾರಸುದಾರರು ಮತ್ತು ಅವರಿಂದ ವರ್ಗಾವಣೆ ಪಡೆದ ವ್ಯಕ್ತಿಗಳು ಸಲ್ಲಿಸಿರುವ ಕೆಲವು ರಿಟ್ ಅರ್ಜಿಗಳಲ್ಲಿ ಅಪೀಲು ವಿಚಾರಣಾ ಪ್ರಾಧಿಕಾರದ ಆಜ್ಞೆಯ ನ್ಯಾಯಸಮ್ಮತತೆಯನ್ನು ಪ್ರಶ್ನಿಸಿದ್ದು, ಈ ರಿಟ್ ಅರ್ಜಿಗಳು ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ವಿಚಾರಣೆಗಾಗಿ ಉಳಿದಿರುವುದರಿಂದ 1894 ರ ಭೂ ಆರ್ಜನಾ ಅಧಿನಿಯಮದ ಉಪಬಂಧಗಳಿಗೆ ಭಿನ್ನವಾದ ಒಂದು ಕಾನೂನನ್ನು ಹೊರಡಿಸುವುದು ಮತ್ತು ಸಂಪೂರ್ಣ ಹಿಡುವಳಿಯ ಸಂಬಂಧದಲ್ಲಿ ಸಂದಾಯಮಾಡತಕ್ಕ ಮೊಬಲಗನ್ನು ನಿರ್ಧರಿಸುವಾಗ ಮೇಲಿನ ರಿಟ್ ಅರ್ಜಿಗಳ ಬಗೆಗಿನ ಅಂತಿಮ ನಿರ್ಣಯಕ್ಕೆ ಅನುಗುಣವಾಗಿ ಯುಕ್ತ ಆದೇಶಗಳನ್ನು ಹೊರಡಿಸುವ ಸಲುವಾಗಿ ಹಣ ಸಂದಾಯದ ಕಮೀಷನರನ್ನು ನೇಮಕ ಮಾಡುವುದಕ್ಕೆ ಸೂಕ್ತ ಉಪಬಂಧವನ್ನು ಕಲ್ಪಿಸುವುದು ಅಗತ್ಯವಾಗಿರುವುದರಿಂದ; ಮತ್ತು

ಇದರಲ್ಲಿ ಈ ಮೊದಲು ಹೇಳಿದ ಉದ್ದೇಶಕ್ಕಾಗಿ ಬೆಂಗಳೂರು ಅರಮನೆ ಮತ್ತು ಅದರ ಸುತ್ತಿಲಿನ ಖಾಲಿ ಜಾಗವನ್ನು ಕಾನೂನಿನ ಮೂಲಕ ಆರ್ಜಿಸಲು ಮತ್ತು ವರ್ಗಾವಣೆ ಮಾಡಲು ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :-

## ಅಧ್ಯಾಯ I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ** .- (1) ಈ ಅಧಿನಿಯಮವನ್ನು ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕದಂದು][1] ಜಾರಿಗೆ ಬರತಕ್ಕದ್ದು .

1. ಈ ಅಧಿನಿಯಮವು ಅಧಿಸೂಚನೆ ಸಂಖ್ಯೆ ಸಿಆಸುಇ 37 ಪಿಎಸ್ ಆರ್ 87 P-II ದಿ: 21.11.1996 ರಿಂದ ಜಾರಿಗೊಳಸಲಾಗಿದೆ.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಅನ್ಯಥಾ ಅಗತ್ಯವಿದ್ದ ಹೊರತು, -

(1) "ಗೊತ್ತುಪಡಿಸಿದ ದಿನಾಂಕ" ಎಂದರೆ 1ನೇ ಪ್ರಕರಣದ (2) ನೇ ಉಪ-ಪ್ರಕರಣದ ಅಡಿ ಗೊತ್ತುಪಡಿಸಲಾದ ದಿನಾಂಕ ; (2) "ಬೆಂಗಳೂರು ಅರಮನೆ" ಎಂದರೆ ಅನುಸೂಚಿ-1 ರಲ್ಲಿ ಸವಿವರವಾಗಿ ತಿಳಿಸಿರುವ ಚರ ಅಥವಾ ಸ್ಥಿರ ಸ್ವತ್ತುಗಳಾದ ಕಟ್ಟಡಗಳು, ರಾಜ ಲಾಂಛನಗಳು, ವರ್ಣಚಿತ್ರಗಳು, ಶಿಲ್ಪಗಳು ಮತ್ತು ಇತರ ಎಲ್ಲ ಕಲಾಕೃತಿಗಳೂ ಸೇರಿದಂತೆ ಬೆಂಗಳೂರಿನ ಅರಮನೆ ಮತ್ತು ಅದಕ್ಕೆ ಹೊಂದಿಕೊಂಡಿರುವ ಖಾಲಿ ಜಾಗ;

(3) "ಮಂಡಲಿ" ಎಂದರೆ 22 ನೇ ಪ್ರಕರಣದ ಅಡಿ ರಚಿಸಲಾದ ಟ್ರಸ್ಟಿಗಳ ಮಂಡಲಿ ;

(4) "ಕಮೀಷನರ್" ಎಂದರೆ 13 ನೇ ಪ್ರಕರಣದಡಿ ನೇಮಕ ಮಾಡಲಾದ ಹಣ ಸಂದಾಯದ ಕಮೀಷನರ್;

(5) "ಕಾನೂನುಸಮ್ಮತ ಪ್ರತಿನಿಧಿಗಳು" ಮತ್ತು "ವಾರಸುದಾರರು" ಎಂದರೆ ಕ್ರಮವಾಗಿ ಮೈಸೂರಿನ ಹಿಂದಿನ ಮಹಾರಾಜರಾದ ದಿವಂಗತ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಕಾನೂನುಸಮ್ಮತ ಪ್ರತಿನಿಧಿಗಳು ಮತ್ತು ವಾರಸುದಾರರು ;

(6) "ಇತರರು" , "ಇತರ ವ್ಯಕ್ತಿಗಳು" ಮತ್ತು "ಇತರ ಹಿತಾಸಕ್ತ ವ್ಯಕ್ತಿಗಳು" ಎಂಬುದರಲ್ಲಿ ಬೆಂಗಳೂರು ಅರಮನೆಗೆ ಸಂಬಂಧಪಟ್ಟಂತೆ ದಿವಂಗತ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅಥವಾ ಅವರ "ಕಾನೂನುಸಮ್ಮತ ಪ್ರತಿನಿಧಿಗಳು" ಮತ್ತು "ವಾರಸುದಾರರು" ಗಳಿಂದ ವರ್ಗಾವಣೆ ಪಡೆದವರೂ ಸೇರುತ್ತಾರೆ;

(7) "ಅನುಸೂಚಿ" ಎಂದರೆ ಈ ಅಧಿನಿಯಮದ ಅನುಸೂಚಿ;

(8) "ವರ್ಷ" ಎಂದರೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರಾರಂಭವಾಗುವ ವರ್ಷ.

**3. ಘೋಷಣೆ** .- ಭಾರತ ಸಂವಿಧಾನದ 31 ಸಿ ಅನುಚ್ಛೇದದ ಅನುಸರಣೆಯಲ್ಲಿ, ಭಾರತ ಸಂವಿಧಾನದ 39ನೇ ಅನುಚ್ಛೇದದ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ತತ್ವಗಳನ್ನು ಪಾಲಿಸುವ ಬಗ್ಗೆ ರಾಜ್ಯದ ಕಾರ್ಯನೀತಿಯನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಈ ಅಧಿನಿಯಮದ ಉಪಬಂಧಗಳನ್ನು ಅಧಿನಿಯಮಿತಿಗೊಳಿಸಲಾಗಿದೆ ಎಂದು ಈ ಮೂಲಕ ಘೋಷಿಸಲಾಗಿದೆ.

## ಅಧ್ಯಾಯ II

## ಬೆಂಗಳೂರು ಅರಮನೆಯ ವರ್ಗಾವಣೆ ಮತ್ತು ನಿಹಿತಗೊಳ್ಳುವಿಕೆ

**4. ರಾಜ್ಯ ಸರ್ಕಾರಕ್ಕೆ ಅರಮನೆಯನ್ನು ವರ್ಗಾಯಿಸುವುದು ಮತ್ತು ಅದರಲ್ಲಿ ನಿಹಿತಗೊಳಿಸುವುದು.**- ಗೊತ್ತುಪಡಿಸಿದ ದಿನಾಂಕದಂದು, ಬೆಂಗಳೂರು ಅರಮನೆ (ಇಲ್ಲಿ ಇನ್ನು ಮುಂದೆ "ಅರಮನೆ" ಎಂದು ಉಲ್ಲೇಖಿತವಾಗುವ) ಮತ್ತು ಅರಮನೆಗೆ ಸಂಬಂಧಪಟ್ಟಂತೆ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ಇತರ ವ್ಯಕ್ತಿಗಳು ಹೊಂದಿರುವ ಹಕ್ಕುಗಳು, ಹಕ್ಕುಮೂಲ ಮತ್ತು ಹಿತಾಸಕ್ತಿಯು ಈ ಅಧಿನಿಯಮದ ಕಾರಣದಿಂದಾಗಿ ರಾಜ್ಯ ಸರ್ಕಾರಕ್ಕೆ ವರ್ಗಾಯಿತವಾಗತಕ್ಕದ್ದು ಮತ್ತು ಸಂಪೂರ್ಣವಾಗಿ ಅದರಲ್ಲಿ ನಿಹಿತವಾಗತಕ್ಕದ್ದು.

**5. ನಿಹಿತವಾಗುವುದರ ಸಾಮಾನ್ಯ ಪರಿಣಾಮ.**- (1) ಅರಮನೆಯಲ್ಲಿ , ಗೊತ್ತುಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ಇತರ ಹಿತಾಸಕ್ತ ವ್ಯಕ್ತಿಗಳ ಒಡೆತನ, ಸ್ವಾಧೀನ, ಅಧಿಕಾರ ಅಥವಾ ನಿಯಂತ್ರಣದಲ್ಲಿದ್ದ ಎಲ್ಲ ಆಸ್ತಿಗಳು, ಹಕ್ಕುಗಳು, ಗುತ್ತಿಗೆ ಹಿಡುವಳಿಗಳು, ಅಧಿಕಾರಗಳು, ಪ್ರಾಧಿಕಾರಗಳು ಮತ್ತು ವಿಶೇಷಾಧಿಕಾರಗಳು ಮತ್ತು ಕಟ್ಟಡಗಳು, ರಾಜ್ಯ ಲಾಂಛನಗಳು, ವರ್ಣ ಚಿತ್ರಗಳು, ಕಲಾಕೃತಿಗಳು, ಶಿಲ್ಪಗಳು ಸೇರಿದಂತೆ ಎಲ್ಲ ಚರ ಮತ್ತು ಸ್ಥಿರಸ್ವತ್ತುಗಳು ಮತ್ತು ಅಂಥ ಆಸ್ತಿಯಲ್ಲಿನ ಅಥವಾ

ಅದರಿಂದ ಉಂಟಾಗುವ ಎಲ್ಲ ಇತರ ಹಕ್ಕುಗಳು ಮತ್ತು ಹಿತಾಸಕ್ತಿಗಳು ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲ ಲೆಕ್ಕಪುಸ್ತಕಗಳು, ರಿಜಿಸ್ಟರುಗಳು ಮತ್ತು ಯಾವುದೇ ಸ್ವರೂಪದ ಇತರ ದಸ್ತಾವೇಜುಗಳನ್ನು ಒಳಗೊಳ್ಳುವುದಾಗಿ ಭಾವಿಸತಕ್ಕದ್ದು.

(2) 4ನೇ ಪ್ರಕರಣದ ಅಡಿ ರಾಜ್ಯ ಸರ್ಕಾರದಲ್ಲಿ ನಿಹಿತವಾದ, ಮೇಲೆ ಹೇಳಲಾದ ಎಲ್ಲ ಸ್ವತ್ತುಗಳನ್ನು, ಹಾಗೆ ಸರ್ಕಾರದಲ್ಲಿ ನಿಹಿತಗೊಂಡ ಕಾರಣದಿಂದಾಗಿ, ಅವುಗಳ ಯಾವುದೇ ಟ್ರಸ್ಟ್, ಬಾಧ್ಯತೆ, ಅಡಮಾನ, ಗುತ್ತಿಗೆ, ಪ್ರಭಾರ, ಧಾರಣಾಧಿಕಾರ ಮತ್ತು ಅವುಗಳಿಗೆ ಬಾಧಕವಾಗುವ ಎಲ್ಲ ಇತರ ಋಣಭಾರಗಳಿಂದ ಮುಕ್ತಗೊಳಿಸತಕ್ಕದ್ದು ಮತ್ತು ವಿಮೋಚನೆಗೊಳಿಸತಕ್ಕದ್ದು ಮತ್ತು ಅಂಥ ಸ್ವತ್ತಿನ ಬಳಕೆಯನ್ನು ಯಾವುದೇ ರೀತಿಯಲ್ಲಿ ನಿರ್ಬಂಧಪಡಿಸುವ ಯಾವುದೇ ನ್ಯಾಯಾಲಯದ ಅಥವಾ ಪ್ರಾಧಿಕಾರದ ಯಾವುದೇ ಜಫ್ತಿ, ನಿಷೇದಾಜ್ಞೆ, ಅಥವಾ ಡಿಕ್ರಿ ಅಥವಾ ಆದೇಶವನ್ನು ಹಿಂತೆಗೆದುಕೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

(3) ಅರಮನೆಯ ಸಂಬಂಧದಲ್ಲಿ ಗೊತ್ತುಪಡಿಸಿದ ದಿನಾಂಕದಂದು ಯಾವುದೇ ಹಕ್ಕು, ಹಕ್ಕುಮೂಲ ಅಥವಾ ಹಿತಾಸಕ್ತಿಯನ್ನು ಹೊಂದಿರುವ ಪ್ರತಿಯೊಬ್ಬ ಕಾನೂನುಸಮ್ಮತ ಪ್ರತಿನಿಧಿ, ವಾರಸುದಾರ ಅಥವಾ ಇತರ ವ್ಯಕ್ತಿಯು 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮತ್ತು 9 ನೇ ಪ್ರಕರಣದಲ್ಲಿ ನಿರ್ಧರಿಸಲಾದ ಮೊಬಲಗಿನಲ್ಲಿ ಹಣ ಪಡೆಯಲು ಹಣ ಸಂದಾಯದ ಕಮೀಷನರಿಗೆ ನಿಯಮಿಸಲಾದ ರೀತಿಯಲ್ಲಿ ಕ್ಲೇಮು ಸಲ್ಲಿಸಲು ಹಕ್ಕುಳ್ಳವರಾಗಿರತಕ್ಕದ್ದು.

(4) ಈ ಅಧಿನಿಯಮದಡಿ ರಾಜ್ಯ ಸರ್ಕಾರದಲ್ಲಿ ನಿಹಿತವಾದ ಯಾವುದೇ ಸ್ವತ್ತಿನ ಪ್ರತಿಯೊಬ್ಬ ಅಡಮಾನದಾರ ಮತ್ತು ಅಂಥ ಸ್ವತ್ತಿನಲ್ಲಿ ಅಥವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ಪ್ರಭಾರ, ಗುತ್ತಿಗೆ, ಧಾರಣಾಧಿಕಾರ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ನಿಯಮಿಸಬಹುದಾದಂಥ ಸಮಯದೊಳಗೆ ಮತ್ತು ಅಂಥ ರೀತಿಯಲ್ಲಿ ಅಂಥ ಅಡಮಾನ, ಗುತ್ತಿಗೆ, ಧಾರಣಾಧಿಕಾರ ಅಥವಾ ಇತರ ಹಿತಾಸಕ್ತಿಯ ಬಗ್ಗೆ ಕಮೀಷನರಿಗೆ ಮಾಹಿತಿಯನ್ನು ಕೊಡತಕ್ಕದ್ದು.

(5) ಸಂದೇಹಗಳ ನಿವಾರಣೆಗಾಗಿ (4)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಸ್ವತ್ತಿನ ಅಡಮಾನದಾರ ಅಥವಾ ಅಂಥ ಯಾವುದೇ ಸ್ವತ್ತಿನಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ಪ್ರಭಾರ, ಗುತ್ತಿಗೆ, ಧಾರಣಾಧಿಕಾರ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿರುವ ಇತರ ಯಾವೊಬ್ಬ ವ್ಯಕ್ತಿಯು ತನ್ನ ಹಕ್ಕುಗಳು ಮತ್ತು ಹಿತಾಸಕ್ತಿಗೆ ಅನುಸಾರವಾಗಿ 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮೊಬಲಗಿನ ಪೈಕಿ ಮತ್ತು 9 ನೇ ಪ್ರಕರಣದ ಅಡಿಯಲ್ಲಿ ನಿರ್ಧರಿಸಲಾದ ಮೊಬಲಗಿನ ಪೈಕಿ ಸಹ ಪೂರ್ಣ ಅಥವಾ ಭಾಗಶಃ ಅಡಮಾನದ ಹಣ ಅಥವಾ ಇತರ ಬಾಕಿಗಳನ್ನು ಕ್ಲೇಮು ಮಾಡಲು ಹಕ್ಕುಳ್ಳವರಾಗಿರತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ. ಆದರೆ ಅಂಥ ಯಾವುದೇ ಅಡಮಾನ, ಪ್ರಭಾರ, ಧಾರಣಾಧಿಕಾರ ಅಥವಾ ಇತರ ಹಿತಾಸಕ್ತಿಯನ್ನು ರಾಜ್ಯ ಸರ್ಕಾರದಲ್ಲಿ ನಿಹಿತವಾದ ಯಾವುದೇ ಸ್ವತ್ತಿನ ವಿರುದ್ಧ ಜಾರಿಗೊಳಿಸತಕ್ಕದ್ದಲ್ಲ.

(6) ಗೊತ್ತುಪಡಿಸಿದ ದಿನಾಂಕದಂದು, 4ನೇ ಪ್ರಕರಣದಡಿ ರಾಜ್ಯ ಸರ್ಕಾರದಲ್ಲಿ ನಿಹಿತವಾದ ಯಾವುದೇ ಸ್ವತ್ತಿಗೆ ಸಂಬಂಧಪಟ್ಟಂತೆ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ಇತರ ಹಿತಾಸಕ್ತ ವ್ಯಕ್ತಿಗಳು ಹೂಡಿದ ಅಥವಾ ಸಲ್ಲಿಸಿದ ಅಥವಾ ಅವರ ವಿರುದ್ಧ ಹೂಡಿದ ಅಥವಾ ಸಲ್ಲಿಸಿದ ಯಾವುದೇ ದಾವೆ, ಅಪೀಲು ಅಥವಾ ವ್ಯವಹರಣೆಯು ಇತ್ಯರ್ಥವಾಗದೆ ಉಳಿದಿದ್ದರೆ, ಅದು ಅರಮನೆಯ ವರ್ಗಾವಣೆಯ ಕಾರಣದಿಂದಾಗಿ ಅಥವಾ ಈ ಅಧಿನಿಯಮದಲ್ಲಿರುವ ಯಾವುವೇ ಉಪಬಂಧಗಳ ಕಾರಣದಿಂದಾಗಿ ಕೊನೆಗೊಳ್ಳತಕ್ಕದ್ದಲ್ಲ, ನಿಂತುಹೋಗತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಪ್ರತಿಕೂಲ ಪ್ರಭಾವ ಬೀರತಕ್ಕದ್ದಲ್ಲ. ಆದರೆ ದಾವೆ, ಅಪೀಲು ಅಥವಾ ಇತರ ವ್ಯವಹರಣೆಯನ್ನು ರಾಜ್ಯ ಸರ್ಕಾರವು ಅಥವಾ ಅದರ ವಿರುದ್ಧ ಅಥವಾ ಅರಮನೆಯ ಮಂಡಲಿಯಲ್ಲಿ ನಿಹಿತವಾಗತಕ್ಕದ್ದೆಂದು 7ನೇ ಪ್ರಕರಣದಡಿ ನಿರ್ದೇಶಿತವಾಗಿದ್ದರೆ ಮಂಡಲಿಯು ಅಥವಾ ಅದರ ವಿರುದ್ಧ ಮುಂದುವರಿಸಬಹುದು, ಪ್ರಾಸಿಕ್ಯೂಟ್ ಮಾಡಬಹುದು ಮತ್ತು ಜಾರಿಗೊಳಿಸಬಹುದು.

**6. ಕೆಲವು ಪೂರ್ವ ಹೊಣೆಗಾರಿಕೆಗಳಿಗೆ ಕಾನೂನುಸಮ್ಮತ ಪ್ರತಿನಿಧಿ ಅಥವಾ ವಾರಸುದಾರ ಅಥವಾ ಇತರ ಹಿತಾಸಕ್ತ ವ್ಯಕ್ತಿಯು ಬದ್ಧನಾಗುವುದು.-** (1) ಗೊತ್ತುಪಡಿಸಿದ ದಿನಾಂಕಕ್ಕೆ ಮುಂಚಿನ ಯಾವುದೇ ದಿನಾಂಕಕ್ಕೆ ಸಂಬಂಧಪಟ್ಟಂತೆ ಅರಮನೆಗೆ ಸಂಬಂಧಿಸಿದ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ಇತರ ವ್ಯಕ್ತಿಗಳ ಪ್ರತಿಯೊಂದು ಹೊಣೆಗಾರಿಕೆಯು ಅಂಥ ಕಾನೂನುಸಮ್ಮತ ಪ್ರತಿನಿಧಿಗಳ ಅಥವಾ ವಾರಸುದಾರರ ಅಥವಾ ಸಂದರ್ಭಾನುಸಾರವಾಗಿ ಇತರರ ಹೊಣೆಗಾರಿಕೆಯಾಗಿರತಕ್ಕದ್ದು ಮತ್ತು ಅವರ ವಿರುದ್ಧ ಜಾರಿಗೊಳಿಸತಕ್ಕದ್ದು

ಮತ್ತು ರಾಜ್ಯ ಸರ್ಕಾರದ ವಿರುದ್ಧವಾಗಿ ಅಥವಾ 7ನೇ ಪ್ರಕರಣದ ಅಡಿಯಲ್ಲಿ ಅರಮನೆಯನ್ನು ಮಂಡಲಿಯಲ್ಲಿ ನಿಹಿತಗೊಳಿಸಲು ನಿರ್ದೇಶಿಸಲಾಗಿದ್ದಲ್ಲಿ, ಮಂಡಲಿಯ ವಿರುದ್ಧವಾಗಿ ಜಾರಿಗೊಳಿಸತಕ್ಕದ್ದಲ್ಲ.

(2) ಸಂದೇಹಗಳ ನಿವಾರಣೆಗಾಗಿ ಈ ಮುಂದಿನಂತೆ ಘೋಷಿಸಲಾಗಿದೆ:-

(ಎ) ಈ ಪ್ರಕರಣದಲ್ಲಿ ಅಥವಾ ಈ ಅಧಿನಿಯಮದ ಯಾವುದೇ ಇತರ ಪ್ರಕರಣದಲ್ಲಿ ವ್ಯಕ್ತವಾಗಿ ಉಪಬಂಧಿಸಿರುವುದನ್ನುಳಿದು, ಗೊತ್ತುಪಡಿಸಿದ ದಿನಾಂಕಕ್ಕೆ ಮುಂಚಿನ ಯಾವುದೇ ಅವಧಿಯ ಸಂಬಂಧದಲ್ಲಿ ಅರಮನೆಗೆ ಸಂಬಂಧಪಟ್ಟ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ಇತರರ ಯಾವ ಹೊಣೆಗಾರಿಕೆಯನ್ನೂ, ರಾಜ್ಯ ಸರ್ಕಾರದ ವಿರುದ್ಧ ಅಥವಾ 7ನೇ ಪ್ರಕರಣದ ಅಡಿಯಲ್ಲಿ, ಅರಮನೆಯು ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದ್ದೆಂದು ನಿರ್ದೇಶಿಸಿರುವಲ್ಲಿ ಮಂಡಲಿಯ ವಿರುದ್ಧ ಜಾರಿಗೊಳಿಸತಕ್ಕದ್ದಲ್ಲ ;

(ಬಿ) ಗೊತ್ತುಪಡಿಸಿದ ದಿನಾಂಕಕ್ಕೆ ಮುಂಚೆ ಉದ್ಭವಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅರಮನೆಗೆ ಸಂಬಂಧಿಸಿದ ಯಾವುದೇ ವಿಷಯ, ಕ್ಲೇಮು ಅಥವಾ ವಿವಾದಕ್ಕೆ ಸಂಬಂಧಿಸಿದಂತೆ ಆ ದಿನಾಂಕದ ತರುವಾಯ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು ನೀಡುವ ಯಾವುದೇ ಐತೀರ್ಪು, ಡಿಕ್ರಿ ಅಥವಾ ಇತರ ಆಜ್ಞೆಯನ್ನು ರಾಜ್ಯ ಸರ್ಕಾರದ ವಿರುದ್ಧ ಅಥವಾ 7ನೇ ಪ್ರಕರಣದ ಅಡಿ ಅರಮನೆಯು ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದ್ದೆಂದು ನಿರ್ದೇಶಿಸಿರುವಲ್ಲಿ ಮಂಡಲಿಯ ವಿರುದ್ಧ ಜಾರಿಗೊಳಿಸತಕ್ಕದ್ದಲ್ಲ;

(ಸಿ) ಗೊತ್ತುಪಡಿಸಿದ ದಿನಾಂಕಕ್ಕೆ ಮುಂಚೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಯಾವುದೇ ಉಪಬಂಧವನ್ನು ಉಲ್ಲಂಘಿಸಿ, ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ಇತರ ವ್ಯಕ್ತಿಗಳು ವಹಿಸಿಕೊಂಡಿದ್ದ ಯಾವುದೇ ಹೊಣೆಗಾರಿಕೆಯನ್ನು ರಾಜ್ಯ ಸರ್ಕಾರದ ವಿರುದ್ಧ ಅಥವಾ 7ನೇ ಪ್ರಕರಣದ ಅಡಿಯಲ್ಲಿ ಅರಮನೆಯು ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದ್ದೆಂದು ನಿರ್ದೇಶಿಸಿರುವಲ್ಲಿ ಮಂಡಲಿಯ ವಿರುದ್ಧ ಜಾರಿಗೊಳಿಸತಕ್ಕದ್ದಲ್ಲ.

**7. ಅರಮನೆಯು ಮಂಡಲಿಯಲ್ಲಿ ನಿಹಿತಗೊಳ್ಳುವ ಬಗ್ಗೆ ರಾಜ್ಯ ಸರ್ಕಾರದ ನಿರ್ದೇಶನ** .- (1) 4 ಮತ್ತು 5 ನೇ ಪ್ರಕರಣಗಳಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, 4ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿದ್ದ ಅರಮನೆಯು ರಾಜ್ಯ ಸರ್ಕಾರದಲ್ಲಿಯೇ ನಿಹಿತವಾಗಿರುವುದು ಮುಂದುವರೆಯುವುದಕ್ಕೆ ಬದಲಾಗಿ, ಅಧಿಸೂಚನೆಯ ದಿನಾಂಕದಂದು ಅಥವಾ (ಗೊತ್ತುಪಡಿಸಿದ ದಿನಾಂಕಕ್ಕಿಂತಲೂ ಮುಂಚಿನ ದಿನಾಂಕವಲ್ಲದ) ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮುಂಚಿನ ಅಥವಾ ನಂತರದ ದಿನಾಂಕದಂದು ತಾನು ವಿಧಿಸಲು ಯುಕ್ತವೆಂದು ಭಾವಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದೆಂಬುದಾಗಿ ನಿರ್ದೇಶಿಸಬಹುದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಅರಮನೆಗೆ ಸಂಬಂಧಿಸಿದ ಹಕ್ಕು, ಹಕ್ಕುಮೂಲ ಮತ್ತು ಹಿತಾಸಕ್ತಿಯು ಮಂಡಲಿಯಲ್ಲಿ ನಿಹಿತಗೊಂಡಿದ್ದಲ್ಲಿ, ಮಂಡಲಿಯು ಹಾಗೆ ನಿಹಿತವಾದ ದಿನಾಂಕದಂದು ಮತ್ತು ಅಂದಿನಿಂದ ಅಂಥ ಅರಮನೆಗೆ ಸಂಬಂಧಿಸಿದಂತೆ ಮಾಲೀಕನಾಗಿದೆ ಎಂಬುದಾಗಿ ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರವು ಹೊಂದಿದ್ದ ಎಲ್ಲ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಹಾಗೆ ನಿಹಿತಗೊಂಡ ದಿನಾಂಕದಂದು ಮತ್ತು ದಿನಾಂಕದಿಂದ ಮಂಡಲಿಯ ಹಕ್ಕುಗಳು ಮತ್ತು ಹೊಣೆಗಾರಿಕೆಗಳಾಗುವುವೆಂದು ಭಾವಿಸತಕ್ಕದ್ದು.

**8. ಕಾನೂನುಸಮ್ಮತ ಪ್ರತಿನಿಧಿಗಳಿಗೆ ಅಥವಾ ವಾರಸುದಾರರಿಗೆ ಅಥವಾ ಇತರ ಹಿತಾಸಕ್ತ ವ್ಯಕ್ತಿಗಳಿಗೆ ನೀಡಬೇಕಾದ ಮೊಬಲಗು.**- 4ನೇ ಪ್ರಕರಣದ ಅಡಿಯಲ್ಲಿ ಅರಮನೆಯನ್ನು ಮತ್ತು ಅರಮನೆಗೆ ಸಂಬಂಧಿಸಿದ ಹಕ್ಕು, ಹಕ್ಕುಮೂಲ ಮತ್ತು ಹಿತಾಸಕ್ತಿಯನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಿ ಅದರಲ್ಲಿ ನಿಹಿತಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು ಹನ್ನೊಂದು ಕೋಟಿ ರೂಪಾಯಿಯನ್ನು ಕಮೀಷನರ ಹೆಸರಿನಲ್ಲಿ ಠೇವಣಿ ಇಡುವ ಮೂಲಕ ಸಂದಾಯ ಮಾಡತಕ್ಕದ್ದು ಮತ್ತು ಸದರಿ ಮೊಬಲಗನ್ನು ೫ಗಿ ನೇ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಅದರ ಸಂಬಂಧದಲ್ಲಿ ಹಕ್ಕುಳ್ಳವರಾದ ಕಾನೂನುಸಮ್ಮತ ಪ್ರತಿನಿಧಿಗಳಿಗೆ, ವಾರಸುದಾರರಿಗೆ ಮತ್ತು ಅಂಥ ಇತರ ವ್ಯಕ್ತಿಗಳಿಗೆ ಸಂದಾಯ ಮಾಡತಕ್ಕದ್ದು.

**9. ಹೆಚ್ಚಿನ ಮೊಬಲಗುಗಳ ಸಂದಾಯ.**- (1) 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮೊಬಲಗಿಗೆ ಗೊತ್ತುಪಡಿಸಿದ ದಿನಾಂಕದಂದು ಪ್ರಾರಂಭವಾಗಿ ರಾಜ್ಯ ಸರ್ಕಾರವು ಕಮೀಷನರ್‌ಗೆ ಆ ಮೊಬಲಗನ್ನು ಸಂದಾಯ

ಮಾಡುವ ದಿನಾಂಕದಂದು ಮುಕ್ತಾಯವಾಗುವ ಅವಧಿಗೆ ವರ್ಷಕ್ಕೆ ಶೇಕಡ ನಾಲ್ಕರ ದರದಲ್ಲಿ ಸರಳ ಬಡ್ಡಿಯನ್ನು ನೀಡತಕ್ಕದ್ದು.

(2) 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೊಬಲಗಿನ ಜೊತೆಗೆ (1)ನೇ ಉಪ-ಪ್ರಕರಣದ ಉಪಬಂಧಗಳಿಗನುಸಾರವಾಗಿ ನಿರ್ಧರಿಸಲಾದ ಮೊಬಲಗನ್ನು ರಾಜ್ಯ ಸರ್ಕಾರವು ಕಾನೂನುಸಮ್ಮ ತ ಪ್ರತಿನಿಧಿಗಳಿಗೆ ಅಥವಾ ವಾರಸುದಾರರಿಗೆ ಅಥವಾ ಸಂದರ್ಭಾನುಸಾರವಾಗಿ ಅದಕ್ಕೆ ಹಕ್ಕುಳ್ಳವರಾದಂಥ ಇತರ ವ್ಯಕ್ತಿಗಳಿಗೆ ನೀಡತಕ್ಕದ್ದು.

(3) ಸಂದೇಹಗಳ ನಿವಾರಣೆಗಾಗಿ, 4ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ, ಅರಮನೆಗೆ ಸಂಬಂಧಿಸಿದ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರ ಹೊಣೆಗಾರಿಕೆಯನ್ನು 8ನೇ ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ಮೊಬಲಗಿನಿಂದ ಮತ್ತು (1)ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ಧರಿಸಲಾದ ಮೊಬಲಗುಗಳಿಂದಲೂ ಸಹ, ಸಂದರ್ಭಾನುಸಾರವಾಗಿ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರ, ಸಾಲಗಾರರ ಹಕ್ಕುಗಳು ಮತ್ತು ಹಿತಾಸಕ್ತಿಗಳಿಗೆ ಅನುಸಾರವಾಗಿ ಬಿಡುಗಡೆ ಮಾಡತಕ್ಕದ್ದು.

## ಅಧ್ಯಾಯ III

## ಅರಮನೆಯ ನಿರ್ವಹಣೆ

**10. ಅರಮನೆಯ ನಿರ್ವಹಣೆ .-** 4ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವಂಥ ಅರಮನೆಯ ಸಾಮಾನ್ಯ ಮೇಲ್ವಿಚಾರಣೆ, ನಿರ್ದೇಶನ, ನಿಯಂತ್ರಣ ಮತ್ತು ನಿರ್ವಹಣೆ ಮತ್ತು ಅರಮನೆಯ ಸಂಬಂಧದಲ್ಲಿನ ಹಕ್ಕು, ಹಕ್ಕುಮೂಲ ಮತ್ತು ಹಿತಾಸಕ್ತಿಯು, 7ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ನಿರ್ದೇಶನ ನೀಡಿರುವಲ್ಲಿ, ಮಂಡಲಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಆ ತರುವಾಯ ಎಲ್ಲ ಇತರ ವ್ಯಕ್ತಿಗಳನ್ನು ಹೊರತುಪಡಿಸಿ, ಅರಮನೆಯ ಸಂಬಂಧದಲ್ಲಿ ಯಾವ ಅಧಿಕಾರಗಳನ್ನು ಚಲಾಯಿಸಲು ಮತ್ತು ಯಾವ ಕೃತ್ಯಗಳನ್ನು ಮಾಡಲು ಮಂಡಲಿಯನ್ನು ಪ್ರಾಧಿಕೃತಗೊಳಿಸಿದೆಯೋ ಅಂಥ ಎಲ್ಲ ಅಧಿಕಾರಗಳನ್ನು ಚಲಾಯಿಸಲು ಮತ್ತು ಅಂಥ ಎಲ್ಲ ಕೃತ್ಯಗಳನ್ನು ಮಾಡಲು ಮಂಡಲಿಗೆ ಹಕ್ಕು ಇರತಕ್ಕದ್ದು.

**11. ಅರಮನೆಯ ನಿರ್ವಹಣೆಯ ಪ್ರಭಾರದಲ್ಲಿರುವ ವ್ಯಕ್ತಿಗಳ ಕರ್ತವ್ಯಗಳು.-** (1) ಮಂಡಲಿಯಲ್ಲಿ ಅರಮನೆಯ ನಿರ್ವಹಣೆಯು ನಿಹಿತವಾದ ಮೇಲೆ ಹಾಗೆ ನಿಹಿತವಾಗುವುದಕ್ಕೆ ನಿಕಟಪೂರ್ವದಲ್ಲಿ ಅರಮನೆಯ ನಿರ್ವಹಣೆಯ ಪ್ರಭಾರದಲ್ಲಿದ್ದ ಎಲ್ಲ ವ್ಯಕ್ತಿಗಳು, ಅರಮನೆಯ ಸಂಬಂಧದಲ್ಲಿ ಅವರ ವಶದಲ್ಲಿರುವ ಎಲ್ಲ ಆಸ್ತಿಗಳು, ಲೆಕ್ಕದ ಪುಸ್ತಕಗಳು, ರಿಜಿಸ್ಟರುಗಳು ಅಥವಾ ಇತರ ದಸ್ತಾವೇಜುಗಳನ್ನು ಮಂಡಲಿಗೆ ಕೊಡಲು ಬದ್ಧರಾಗಿರತಕ್ಕದ್ದು.

(2) ರಾಜ್ಯ ಸರ್ಕಾರವು ವಿಷಯದ ಸಂಬಂಧದಲ್ಲಿ ತನಗೆ ಅಪೇಕ್ಷಣೀಯವೆಂದು ಕಂಡು ಬರುವಂಥ ನಿರ್ದೇಶನಗಳನ್ನು ಮಂಡಲಿಗೆ ನೀಡಬಹುದು ಮತ್ತು ಮಂಡಲಿಯೂ ಸಹ ಅರಮನೆಯ ನಿರ್ವಹಣೆಯ ಸಮಯದಲ್ಲಿ ಉದ್ಭವಿಸುವ ಇತರ ಯಾವುದೇ ವಿಷಯದ ಸಂಬಂಧದಲ್ಲಿ ಅಂಥ ನಿರ್ವಹಣೆಯನ್ನು ಯಾವ ರೀತಿಯಲ್ಲಿ ಕೈಗೊಳ್ಳಬೇಕೆಂಬ ಬಗ್ಗೆ ಸೂಚನೆಗಳಿಗಾಗಿ ರಾಜ್ಯ ಸರ್ಕಾರಕ್ಕೆ ಅರ್ಜಿ ಸಲ್ಲಿಸುವುದು ತನಗೆ ಅಗತ್ಯವೆಂದು ಕಂಡುಬಂದಲ್ಲಿ ಯಾವುದೇ ಸಮಯದಲ್ಲಿ ಹಾಗೆ ಅರ್ಜಿ ಸಲ್ಲಿಸಬಹುದು.

**12. ತಮ್ಮ ಸ್ವಾಧೀನದಲ್ಲಿರುವ ಆಸ್ತಿಗಳ ಲೆಕ್ಕ ಕೊಡಲು ವ್ಯಕ್ತಿಗಳ ಕರ್ತವ್ಯ.-** (1) ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ಅಥವಾ ಮಂಡಲಿಯಲ್ಲಿ ನಿಹಿತವಾಗಿರುವಂಥ ಮತ್ತು ಕಾನೂನುಸಮ್ಮತ ಪ್ರತಿನಿಧಿಗಳಿಗೆ ಅಥವಾ ವಾರಸುದಾರರಿಗೆ ಅಥವಾ ಇತರ ವ್ಯಕ್ತಿಗಳಿಗೆ ಸೇರಿದ ಅಥವಾ ಅರಮನೆಯು ರಾಜ್ಯ ಸರ್ಕಾರ ಅಥವಾ ಮಂಡಲಿಯಲ್ಲಿ ನಿಹಿತವಾಗಿರದಿದ್ದರೆ ಹಾಗೆ ಸೇರುತ್ತಿದ್ದ, ಆ ಅರಮನೆಗೆ ಸಂಬಂಧಿಸಿದ ಯಾವುವೇ ಆಸ್ತಿಗಳು, ಪುಸ್ತಕಗಳು, ದಸ್ತಾವೇಜುಗಳು ಮತ್ತು ಇತರ ಕಾಗದಪತ್ರಗಳನ್ನು ಗೊತ್ತುಪಡಿಸಿದ ದಿನಾಂಕದಂದು ತನ್ನ ಸ್ವಾಧೀನತೆಯಲ್ಲಿ ಅಥವಾ ನಿಯಂತ್ರಣದಲ್ಲಿ ಹೊಂದಿರುವ ವ್ಯಕ್ತಿಯು, ರಾಜ್ಯ ಸರ್ಕಾರಕ್ಕೆ ಅಥವಾ ಮಂಡಲಿಗೆ ಅಥವಾ ರಾಜ್ಯ ಸರ್ಕಾರ ಅಥವಾ ಮಂಡಲಿಯು ಈ ಪರವಾಗಿ ನಿರ್ದಿಷ್ಟಪಡಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸದರಿ ಆಸ್ತಿಗಳು, ಪುಸ್ತಕಗಳು, ದಸ್ತಾವೇಜುಗಳು ಮತ್ತು ಇತರ ಕಾಗದಪತ್ರಗಳ ಬಗ್ಗೆ ಲೆಕ್ಕ ನೀಡಲು ಬದ್ಧನಾಗಿರತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರ ಅಥವಾ ಮಂಡಲಿಯಲ್ಲಿ ನಿಹಿತವಾಗಿರುವ ಅರಮನೆಯ ಸ್ವಾಧೀನತೆಯನ್ನು ಪಡೆಯುವುದಕ್ಕೆ ಅವಶ್ಯಕವಾದ ಎಲ್ಲ ಕ್ರಮಗಳನ್ನು ರಾಜ್ಯ ಸರ್ಕಾರವು ಅಥವಾ ಮಂಡಲಿಯು ಕೈಗೊಳ್ಳಬಹುದು ಅಥವಾ ಕೈಗೊಳ್ಳುವಂತೆ ಮಾಡಬಹುದು.

(3) 4ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಅರಮನೆಗೆ ಸಂಬಂಧಿಸಿದಂತೆ, ಗೊತ್ತುಪಡಿಸಿದ ದಿನಾಂಕದಂದು ಇದ್ದ ಹಾಗೆ ಎಲ್ಲಾ ಆಸ್ತಿ ಮತ್ತು ಸ್ವತ್ತುಗಳ ಪೂರ್ಣ ಆಸ್ತಿ ಪಟ್ಟಿಯನ್ನು ರಾಜ್ಯ ಸರ್ಕಾರವು ಈ ಪರವಾಗಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ, ರಾಜ್ಯ ಸರ್ಕಾರಕ್ಕೆ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ಸಂದರ್ಭಾನುಸಾರ ಇತರರು ಒದಗಿಸತಕ್ಕದ್ದು. ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರ ಅಥವಾ ಮಂಡಲಿಯು ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ಇತರರಿಗೆ ಯುಕ್ತ ಸೌಲಭ್ಯಗಳನ್ನು ನೀಡತಕ್ಕದ್ದು.

## ಅಧ್ಯಾಯ IV

### ಹಣ ಸಂದಾಯದ ಕಮೀಷನರು

**13. ಹಣ ಸಂದಾಯದ ಕಮೀಷನರ ನೇಮಕ .-** (1) 8 ಮತ್ತು 9 ನೇ ಪ್ರಕರಣಗಳ ಅಡಿಯಲ್ಲಿ ಸಂದಾಯ ಮಾಡಬಹುದಾದ ಮೊಬಲಗಿನ ಹಂಚಿಕೆಯ ಉದ್ದೇಶಕ್ಕಾಗಿ ರಾಜ್ಯಪತ್ರದಲ್ಲಿ ಅಧಿಸೂಚನೆ ನೀಡುವ ಮೂಲಕ ರಾಜ್ಯ ಸರ್ಕಾರವು ಹಣ ಸಂದಾಯದ ಕಮೀಷನರನ್ನು ನೇಮಕ ಮಾಡತಕ್ಕದ್ದು.

(2) ರಾಜ್ಯ ಸರ್ಕಾರವು ಕಮೀಷನರಿಗೆ ಸಹಾಯಮಾಡಲು ತಾನು ಯುಕ್ತವೆಂದು ಭಾವಿಸುವಂಥ ಇತರ ವ್ಯಕ್ತಿಗಳನ್ನು ಸಹ ನೇಮಕ ಮಾಡಬಹುದು. ನಂತರ ಕಮೀಷನರು ಈ ಅಧಿನಿಯಮದ ಅಡಿಯಲ್ಲಿ ತಾನು ಚಲಾಯಿಸಬಹುದಾದ ಎಲ್ಲಾ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಅಂಥ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳನ್ನು ಪ್ರಾಧಿಕೃತಗೊಳಿಸಬಹುದು ಮತ್ತು ಬೇರೆ ಬೇರೆ ಅಧಿಕಾರಗಳನ್ನು ಚಲಾಯಿಸಲು ಬೇರೆ ಬೇರೆ ವ್ಯಕ್ತಿಗಳನ್ನು ಪ್ರಾಧಿಕೃತಗೊಳಿಸಬಹುದು.

(3) ಕಮೀಷನರು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ಚಲಾಯಿಸಲು ಕಮೀಷನರಿಂದ ಪ್ರಾಧಿಕೃತನಾದ ಯಾರೇ ವ್ಯಕ್ತಿಯು, ಈ ಅಧಿಕಾರಗಳನ್ನು, ಪ್ರಾಧಿಕೃತಗೊಳಿಸುವ ಮೂಲಕವಲ್ಲದೆ ಈ ಅಧಿನಿಯಮದ ಅಡಿಯಲ್ಲಿ ನೇರವಾಗಿ ಆ ವ್ಯಕ್ತಿಗೆ ಪ್ರದತ್ತಗೊಳಿಸಿದ್ದರೆ ಅಧಿಕಾರಗಳನ್ನು ಚಲಾಯಿಸಬಹುದಾಗಿದ್ದ ರೀತಿಯಲ್ಲಿ ಮತ್ತು ಅಷ್ಟೇ ಪರಿಣಾಮಕಾರಿಯಾಗಿ ಚಲಾಯಿಸತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿ ನೇಮಕ ಮಾಡಲಾದ ಕಮೀಷನರ್ ಮತ್ತು ಇತರ ವ್ಯಕ್ತಿಗಳ ವೇತನಗಳು ಮತ್ತು ಭತ್ಯೆಗಳನ್ನು ರಾಜ್ಯದ ಸಂಚಿತ ನಿಧಿಯಿಂದ ಭರಿಸತಕ್ಕದ್ದು.

**14. ಕಮೀಷನರಿಗೆ ರಾಜ್ಯ ಸರ್ಕಾರದಿಂದ ಹಣ ಸಂದಾಯ.-** (1) ರಾಜ್ಯ ಸರ್ಕಾರವು, ಗೊತ್ತುಪಡಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕಾನೂನುಸಮ್ಮತ ಪ್ರತಿನಿಧಿಗಳಿಗೆ ಅಥವಾ ವಾರಸುದಾರರಿಗೆ ಮತ್ತು ಇತರ ಹಿತಾಸಕ್ತ ವ್ಯಕ್ತಿಗಳಿಗೆ ಸಂದಾಯ ಮಾಡುವುದಕ್ಕಾಗಿ ಕಮೀಷನರ್ ಬಳಿ,-

(ಎ) 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮೊಬಲಗಿಗೆ ಸಮನಾದ ಮೊಬಲಗನ್ನು; ಮತ್ತು

(ಬಿ) 9ನೇ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬಹುದಾದ ಮೊಬಲಗಿಗೆ ಸಮನಾದ ಮೊಬಲಗನ್ನು,

- ನಗದು ರೂಪದಲ್ಲಿ ಠೇವಣಿ ಇಡತಕ್ಕದ್ದು.

(2) ಕಮೀಷನರ ಹೆಸರಿನಲ್ಲಿ ರಾಜ್ಯದ ಸಾರ್ವಜನಿಕ ಲೆಕ್ಕದಲ್ಲಿ ರಾಜ್ಯ ಸರ್ಕಾರವು ಒಂದು ಠೇವಣಿ ಖಾತೆಯನ್ನು ತೆರೆಯತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಕಮೀಷನರಿಗೆ ಸಂದಾಯ ಮಾಡಿದ ಪ್ರತಿಯೊಂದು ಮೊಬಲಗನ್ನು ಅವನು ಠೇವಣಿ ಖಾತೆಗೆ ಜಮಾ ಮಾಡತಕ್ಕದ್ದು ಮತ್ತು ಸದರಿ ಠೇವಣಿ ಖಾತೆಯನ್ನು ಕಮೀಷನರು ನಿರ್ವಹಿಸತಕ್ಕದ್ದು.

(3) ಕಮೀಷನರು ಈ ಅಧಿನಿಯಮದ ಅಡಿಯಲ್ಲಿ ಅವನಿಗೆ ಯಾವ ಸಂಪತ್ತಿನ ಬಗ್ಗೆ ಹಣ ಸಂದಾಯ ಮಾಡಲಾಯಿತೋ ಆ ಸಂಪತ್ತಿನ ಸಂಬಂಧದಲ್ಲಿ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು.

(4) (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಠೇವಣಿ ಖಾತೆಗೆ ಜಮಾ ಆದ ಹಣದ ಮೊಬಲಗಿನ ಮೇಲಿನ ಬಡ್ಡಿಯು, ಕಾನೂನುಸಮ್ಮತ ಪ್ರತಿನಿಧಿಗಳ ಅಥವಾ ವಾರಸುದಾರರ ಅಥವಾ ಇತರ ಹಿತಾಸಕ್ತ ವ್ಯಕ್ತಿಗಳ ಪ್ರಯೋಜನಕ್ಕೆ ಪ್ರಾಪ್ತವಾಗತಕ್ಕದ್ದು.

**15. ರಾಜ್ಯ ಸರ್ಕಾರದ ಮತ್ತು ಮಂಡಲಿಯ ನಿರ್ದಿಷ್ಟ ಅಧಿಕಾರಗಳು.-** (1) ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರ ಮಂಡಲಿಗೆ, ಇತರ ಎಲ್ಲ ವ್ಯಕ್ತಿಗಳನ್ನು ಹೊರತುಪಡಿಸಿ, ರಾಜ್ಯ ಸರ್ಕಾರ ಅಥವಾ ಮಂಡಲಿಯಲ್ಲಿ ನಿಹಿತವಾಗಿರುವ ಅರಮನೆಯ ಸಂಬಂಧದಲ್ಲಿ ಬಾಕಿ ಇರುವ ಮತ್ತು ಗೊತ್ತುಪಡಿಸಿದ ದಿನಾಂಕದ ನಂತರ

ಬಿಡುಗಡೆಯಾದ ಯಾವುದೇ ಮೊಬಲಗನ್ನು ಹಾಗೆ ಬಿಡುಗಡೆಯಾದ ಮೊಬಲಗು ಗೊತ್ತುಪಡಿಸಿದ ದಿನಾಂಕದ ಹಿಂದಿನ ಅವಧಿಗೆ ಸಂಬಂಧಪಟ್ಟಿದ್ದರೂ ಸಹ, ಗೊತ್ತುಪಡಿಸಿದ ದಿನಾಂಕದವರೆಗೆ ಸ್ವೀಕರಿಸಲು ಹಕ್ಕು ಇರತಕ್ಕದ್ದು.

(2) ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರ ಮಂಡಲಿಯು ಅರಮನೆಗೆ ಸಂಬಂಧಿಸಿದ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ಇತರ ಹಿತಾಸಕ್ತ ವ್ಯಕ್ತಿಗಳ ಹೊಣೆಗಾರಿಕೆಯನ್ನು ಮುಕ್ತಗೊಳಿಸುವುದಕ್ಕಾಗಿ ಗೊತ್ತುಪಡಿಸಿದ ದಿನಾಂಕದ ನಂತರ ರಾಜ್ಯ ಸರ್ಕಾರ ಅಥವಾ ಮಂಡಲಿಯು ಮಾಡಿದ ಪ್ರತಿಯೊಂದು ಸಂದಾಯದ ಬಗ್ಗೆ ಕಮೀಷನರಿಗೆ ಕ್ಲೇಮು ಸಲ್ಲಿಸಬಹುದು. ಗೊತ್ತುಪಡಿಸಿದ ದಿನಾಂಕಕ್ಕಿಂತಲೂ ಹಿಂದಿನ ಅವಧಿಗೆ ಸಂಬಂಧಿಸಿದ ಅಂಥ ಕ್ಲೇಮುಗಳ ಆದ್ಯತೆಯು, ರಾಜ್ಯ ಸರ್ಕಾರ ಅಥವಾ ಮಂಡಲಿಯು ಮುಕ್ತಗೊಳಿಸಿದ ಅಂಥ ಹೊಣೆಗಾರಿಕೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಈ ಅಧಿನಿಯಮದ ಅಡಿಯಲ್ಲಿ ನೀಡಲಾದ ಆದ್ಯತೆಗಳಿಗನುಸಾರವಾಗಿ ಇರತಕ್ಕದ್ದು.

(3) ಈ ಅಧಿನಿಯಮದಲ್ಲಿ ಉಪಬಂಧಿಸಿರುವುದನ್ನುಳಿದು,ಗೊತ್ತುಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಮುಕ್ತಗೊಳಿಸಿಲ್ಲದ, ಯಾವುವೇ ವ್ಯವಹಾರಗಳ ಬಗೆಗಿನ ಅರಮನೆಗೆ ಸಂಬಂಧಿಸಿದ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ಇತರ ಹಿತಾಸಕ್ತ ವ್ಯಕ್ತಿಗಳ ಹೊಣೆಗಾರಿಕೆಗಳು, ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ಸಂದರ್ಭಾನುಸಾರ ಇತರ ಹಿತಾಸಕ್ತ ವ್ಯಕ್ತಿಗಳ ಹೊಣೆಗಾರಿಕೆಗಳಾಗಿರತಕ್ಕದ್ದು.

**16. ಕ್ಲೇಮುಗಳನ್ನು ಕಮೀಷನರಿಗೆ ಮಾಡತಕ್ಕದ್ದು.**- ಗೊತ್ತುಪಡಿಸಿದ ದಿನಾಂಕಕ್ಕೂ ಮೊದಲು ಅರಮನೆಯ ಸಂಬಂಧದಲ್ಲಿ ಅನುಸೂಚಿ II ರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯದ ಬಗ್ಗೆ ಕ್ಲೇಮು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ಗೊತ್ತುಪಡಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕಮೀಷನರಿಗೆ ಕ್ಲೇಮನ್ನು ಸಲ್ಲಿಸತಕ್ಕದ್ದು :

ಪರಂತು, ಕ್ಲೇಮುದಾರನಿಗೆ ಮೂವತ್ತು ದಿನಗಳ ಅವಧಿಯೊಳಗಾಗಿ ಕ್ಲೇಮನ್ನು ಸಲ್ಲಿಸಲು ಸಾಕಷ್ಟು ಕಾರಣಗಳಿಂದಾಗಿ ಸಾಧ್ಯವಾಗಲಿಲ್ಲವೆಂದು ಕಮೀಷನರಿಗೆ ಮನವರಿಕೆಯಾದರೆ, ಅವನು ಮತ್ತೆ ಮೂವತ್ತು ದಿನಗಳ ಅವಧಿಯವರೆಗೆ ಕ್ಲೇಮನ್ನು ಸ್ವೀಕರಿಸಬಹುದು, ಆದರೆ ನಂತರ ಸ್ವೀಕರಿಸತಕ್ಕದ್ದಲ್ಲ.

**17. ಕ್ಲೇಮುಗಳ ಆದ್ಯತೆ.**- 16 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಕ್ಲೇಮುಗಳ ಆದ್ಯತೆಯು ಈ ಮುಂದಿನ ತತ್ವಗಳಿಗೆ ಅನುಸಾರವಾಗಿರತಕ್ಕದ್ದು, ಎಂದರೆ:-

(ಎ) ಪ್ರವರ್ಗ I ಕ್ಕೆ ಇತರ ಎಲ್ಲ ಪ್ರವರ್ಗಗಳಿಗಿಂತ ಹೆಚ್ಚಿನ ಆದ್ಯತೆಯಿರತಕ್ಕದ್ದು ಮತ್ತು ಪ್ರವರ್ಗ II ಕ್ಕೆ ಪ್ರವರ್ಗ III ಕ್ಕಿಂತ ಹೆಚ್ಚಿನ ಆದ್ಯತೆಯಿರತಕ್ಕದ್ದು ಮತ್ತು ಇದೇ ರೀತಿ ಉಳಿದವುಗಳು ಇರತಕ್ಕದ್ದು ;

(ಬಿ) ಪ್ರತಿಯೊಂದು ಪ್ರವರ್ಗದಲ್ಲಿ ನಿರ್ದಿಷ್ಟಪಡಿಸಿದ ಕ್ಲೇಮುಗಳು ಸಮಾನವಾದ ಮಟ್ಟದವುಗಳಾಗಿರತಕ್ಕದ್ದು ಮತ್ತು ಅವುಗಳನ್ನು ಪೂರ್ಣವಾಗಿ ಸಂದಾಯ ಮಾಡತಕ್ಕದ್ದು. ಆದರೆ ಕ್ಲೇಮುಗಳನ್ನು ಪೂರ್ಣವಾಗಿ ಸಂದಾಯ ಮಾಡಲು ಸಾಲುವಷ್ಟು ಮೊಬಲಗು ಇಲ್ಲದಿರುವಲ್ಲಿ ಅವುಗಳನ್ನು ಸಮವಾದ ಪ್ರಮಾಣಗಳಲ್ಲಿ ಹಂಚಿಕೆ ಮಾಡತಕ್ಕದ್ದು ಮತ್ತು ಅದಕ್ಕನುಸಾರವಾಗಿ ಸಂದಾಯ ಮಾಡತಕ್ಕದ್ದು ; ಮತ್ತು

(ಸಿ) ಕೆಳಗಿನ ಪ್ರವರ್ಗಗಳಲ್ಲಿ ನಿರ್ದಿಷ್ಟಪಡಿಸಿದ ಹೊಣೆಗಾರಿಕೆಗಳನ್ನು ಮುಕ್ತಗೊಳಿಸುವ ಪ್ರಶ್ನೆಯು, ಅದಕ್ಕೆ ನಿಕಟ ಉನ್ನತ ಪ್ರವರ್ಗಗಳಲ್ಲಿ ನಿರ್ದಿಷ್ಟಪಡಿಸಿದ ಹೊಣೆಗಾರಿಕೆಗಳನ್ನು ಭರಿಸಿದ ನಂತರವೂ ಹೆಚ್ಚುವರಿ ಮೊಬಲಗು ಉಳಿದಲ್ಲಿ ಮಾತ್ರ ಉದ್ಭವಿಸುತ್ತದೆ.

**18. ಕ್ಲೇಮುಗಳ ಪರಿಶೀಲನೆ.**- (1) 16 ನೇ ಪ್ರಕರಣದ ಅಡಿಯಲ್ಲಿ ಕ್ಲೇಮುಗಳನ್ನು ಸ್ವೀಕರಿಸಿದ ನಂತರ ಕಮೀಷನರು ಅನುಸೂಚಿ II ರಲ್ಲಿ ನಿರ್ದಿಷ್ಟಪಡಿಸಿದ ಆದ್ಯತೆಗಳ ಕ್ರಮಕ್ಕನುಸಾರವಾಗಿ ಕ್ಲೇಮುಗಳನ್ನು ವ್ಯವಸ್ಥೆ ಮಾಡತಕ್ಕದ್ದು ಮತ್ತು ಅಂಥ ಆದ್ಯತೆಯ ಕ್ರಮಕ್ಕನುಸಾರವಾಗಿ ಅವುಗಳನ್ನು ಪರಿಶೀಲಿಸತಕ್ಕದ್ದು.

(2) ಕ್ಲೇಮುಗಳ ಪರಿಶೀಲನೆ ಮಾಡಿದಾಗ, ಈ ಅಧಿನಿಯಮದ ಅಡಿಯಲ್ಲಿ ಕಮೀಷನರಿಗೆ ಸಂದಾಯ ಮಾಡಿದ ಮೊಬಲಗು ಯಾವುದೇ ಕೆಳಗಿನ ಪ್ರವರ್ಗಗಳಲ್ಲಿ ನಿರ್ದಿಷ್ಟಪಡಿಸಿದ ಹೊಣೆಗಾರಿಕೆಗಳನ್ನು ಭರಿಸಲು ಸಾಕಾಗುವಷ್ಟು ಇಲ್ಲವೆಂದು ಅವನು ಅಭಿಪ್ರಾಯಪಟ್ಟಲ್ಲಿ, ಅಂಥ ಪ್ರವರ್ಗಕ್ಕೆ ಸಂಬಂಧಿಸಿದ ಕ್ಲೇಮುಗಳನ್ನು ಪರಿಶೀಲಿಸುವುದು ಅಗತ್ಯವಾಗಿರತಕ್ಕದ್ದಲ್ಲ.

**19. ಕ್ಲೇಮುಗಳ ಅಂಗೀಕಾರ ಅಥವಾ ನಿರಾಕರಣೆ.-** (1) IIನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಆದ್ಯತೆಗಳಿಗನುಗುಣವಾಗಿ ಕ್ಲೇಮುಗಳನ್ನು ಪರಿಶೀಲಿಸಿದ ನಂತರ ಕಮಿಷನರು, ಪ್ರತಿಯೊಬ್ಬ ಕ್ಲೇಮುದಾರನು ತನ್ನ ಕ್ಲೇಮಿನ ಬಗ್ಗೆ ರುಜುವಾತನ್ನು ಯಾವ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಸಲ್ಲಿಸಬೇಕೋ ಆ ದಿನಾಂಕವನ್ನು ನಿಗದಿಪಡಿಸತಕ್ಕದ್ದು.

(2) ಹಾಗೆ ನಿಗದಿಪಡಿಸಿದ ದಿನಾಂಕದ ಬಗ್ಗೆ ನೋಟೀಸನ್ನು ಹದಿನಾಲ್ಕು ದಿನಗಳಿಗೆ ಕಡಿಮೆ ಇಲ್ಲದಂತೆ ದೇಶದಲ್ಲಿ ವ್ಯಾಪಕ ಪ್ರಸಾರವಿರುವ ಇಂಗ್ಲೀಷ್ ಭಾಷೆಯ ದಿನಪತ್ರಿಕೆಯೊಂದರಲ್ಲಿ ಮತ್ತು ರಾಜ್ಯದಲ್ಲಿ ವ್ಯಾಪಕ ಪ್ರಸಾರವುಳ್ಳ ಕನ್ನಡ ಭಾಷೆಯ ದಿನಪತ್ರಿಕೆಯೊಂದರಲ್ಲಿ ಜಾಹೀರಾತಿನ ಮೂಲಕ ನೀಡತಕ್ಕದ್ದು ಮತ್ತು ಅಂಥ ಪ್ರತಿಯೊಂದು ನೋಟೀಸು, ಕ್ಲೇಮುದಾರನಿಗೆ ಜಾಹೀರಾತಿನಲ್ಲಿ  ನಿರ್ದಿಷ್ಟಪಡಿಸಿದ ಸಮಯದೊಳಗೆ ಕಮಿಷನರಲ್ಲಿ ತನ್ನ ಕ್ಲೇಮಿನ ರುಜುವಾತು ಸಲ್ಲಿಸಲು ಕರೆ ನೀಡತಕ್ಕದ್ದು.

(3) ಕಮಿಷನರು ನಿರ್ದಿಷ್ಟಪಡಿಸಿದ ಸಮಯದೊಳಗೆ ರುಜುವಾತನ್ನು ಸಲ್ಲಿಸಲು ತಪ್ಪಿದ ಪ್ರತಿಯೊಬ್ಬ ಕ್ಲೇಮುದಾರನು, ಕಮಿಷನರು ಮಾಡುವ ಹಂಚಿಕೆಯಿಂದ ಹೊರತಾಗತಕ್ಕದ್ದು.

(4) ಕಮಿಷನರು ತಾನು ಅವಶ್ಯಕವೆಂದು ಅಭಿಪ್ರಾಯ ಪಡುವಂಥ ತನಿಖೆಯನ್ನು ನಡೆಸಿದ ನಂತರ ಮತ್ತು ಕ್ಲೇಮುದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ನಂತರ, ಅಂಥ ಕ್ಲೇಮುಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ನಿರ್ಧರಿಸತಕ್ಕದ್ದು ಮತ್ತು ಲಿಖಿತ ಆದೇಶದ ಮೂಲಕ ಕ್ಲೇಮನ್ನು ಪೂರ್ಣವಾಗಿ ಅಥವಾ ಭಾಗಶಃ ಅಂಗೀಕರಿಸಬಹುದು ಅಥವಾ ನಿರಾಕರಿಸಬಹುದು ಮತ್ತು ಕಾನೂನುಸಮ್ಮತ ಪ್ರತಿನಿಧಿಗಳು, ವಾರಸುದಾರರು ಅಥವಾ ಇತರ ವ್ಯಕ್ತಿಗಳ  ಕ್ಲೇಮುಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ನಿರ್ಧರಿಸುವಾಗ, ಕಮಿಷನರು, 1976ರ ನಗರ ಭೂ (ಮಿತಿ ಮತ್ತು ವಿನಿಯಮ) ಅಧಿನಿಯಮದ ಅಡಿಯಲ್ಲಿನ ಸಕ್ಷಮ ಪ್ರಾಧಿಕಾರದ ಆದೇಶಗಳ  ವಿರುದ್ಧ ಇತ್ಯರ್ಥವಾಗದೆ ಉಳಿದಿರುವ ರಿಟ್ ಅರ್ಜಿಗಳ ಸಂಬಂಧದಲ್ಲಿ ಹೊರಡಿಸಲಾಗುವ ಅಂತಿಮ ಆದೇಶದ ಪರಿಣಾಮವನ್ನು ಮತ್ತು ಅಧಿನಿಯಮದ ಅಡಿಯಲ್ಲಿನ ರಾಜ್ಯ ಸರ್ಕಾರದ ಹಕ್ಕುಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು. ಮೊಬಲಗನ್ನು ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿ ಅಥವಾ ವ್ಯಕ್ತಿಗಳು ಯಾರೆಂಬ ಬಗೆಗಿನ ವಿವಾದವನ್ನು ಮತ್ತು ಯಾವನೇ ಮೃತ ಕ್ಲೇಮುದಾರನ ಕಾನೂನುಸಮ್ಮತ ಪ್ರತಿನಿಧಿ ಯಾರೆಂಬ ಬಗೆಗಿನ ವಿವಾದವನ್ನು ಸಹ ಕಮಿಷನರು ನಿರ್ಧರಿಸತಕ್ಕದ್ದು.

(5) ಕಮಿಷನರು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಉದ್ಭವಿಸುವ ಎಲ್ಲ ವಿಷಯಗಳ ಬಗ್ಗೆ ತನ್ನದೇ ಕಾರ್ಯ ವಿಧಾನವನ್ನು ವಿನಿಯಮಗೊಳಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತನಿಖೆಯನ್ನು ನಡೆಸುವ ಉದ್ದೇಶಕ್ಕಾಗಿ ಈ ಮುಂದಿನ ವಿಷಯಗಳ ಸಂಬಂಧದಲ್ಲಿ ದಾವೆಯ ವಿಚಾರಣೆ ನಡೆಸುವ ಸಿವಿಲ್ ನ್ಯಾಯಾಲಯವು 1908 ರ ಸಿವಿಲ್ ಪ್ರಕ್ರಿಯಾ ಸಂಹಿತೆಯಡಿ ಹೊಂದಿರುವ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು : -

(ಎ) ಯಾವೊಬ್ಬ ಸಾಕ್ಷಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಅಗತ್ಯಪಡಿಸುವುದು ಮತ್ತು ಪ್ರಮಾಣ ಮಾಡಿಸುವ ಮೂಲಕ ಅವನನ್ನು ಪರೀಕ್ಷಿಸುವುದು;

(ಬಿ) ಯಾವುದೇ ದಸ್ತಾವೇಜನ್ನು ಕಂಡುಹಿಡಿಯುವುದು ಮತ್ತು  ಹಾಜರುಪಡಿಸುವುದು ;

(ಸಿ) ಅಫಿಡವಿಟ್ಟಿನ ಮೂಲಕ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಸಾಕ್ಷಿಗಳ ವಿಚಾರಣೆಗಾಗಿ ಕಮಿಷನನ್ನು ಹೊರಡಿಸುವುದು.

(6) ಕಮಿಷನರ ಮುಂದಿರುವ ಯಾವುದೇ ತನಿಖೆಯು, 1860 ರ ದಂಡ ಸಂಹಿತೆಯ 193 ಮತ್ತು 228 ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದ್ದು ಮತ್ತು ಕಮಿಷನರನ್ನು ದಂಡ ಪ್ರಕ್ರಿಯಾ ಸಂಹಿತೆ 1973ರ 195ನೇ ಪ್ರಕರಣ ಮತ್ತು XXVI ನೇ ಅಧ್ಯಾಯದ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

(7) ಕಮೀಷನರ ತೀರ್ಮಾನದಿಂದ ಬಾಧಿತನಾದ ಕ್ಲೇಮುದಾರನು, ತೀರ್ಮಾನದ ವಿರುದ್ಧವಾಗಿ ಯಾವ ಸಿಟಿ ಸಿವಿಲ್ ನ್ಯಾಯಾಲಯ, ಬೆಂಗಳೂರು  ಇದರ ಸ್ಥಳೀಯ ಪರಿಮಿತಿಗಳ ಅಧಿಕಾರ ವ್ಯಾಪ್ತಿಯೊಳಗೆ ಅರಮನೆಯು ಇರುವುದೋ ಆ ಸಿವಿಲ್ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

**20. ಕ್ಲೇಮುದಾರರಿಗೆ ಕಮೀಷನರಿಂದ ಮೊಬಲಗಿನ ಹಂಚಿಕೆ.** – ಈ ಅಧಿನಿಯಮದ ಅಡಿಯಲ್ಲಿ ಒಂದು ಕ್ಲೇಮನ್ನು ಅಂಗೀಕರಿಸಿದ ನಂತರ, ಅಂಥ ಕ್ಲೇಮಿನ ಸಂಬಂಧದಲ್ಲಿ ಬಾಕಿ ಇರುವ ಮೊಬಲಗನ್ನು ಕಮಿಷನರು ಅಂಥ ಮೊಬಲಗು ಬಾಕಿಯಿರುವ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸಂದಾಯ ಮಾಡತಕ್ಕದ್ದು ಮತ್ತು ಅಂಥ ಸಂದಾಯದ ನಂತರ ಅಂಥ ಕ್ಲೇಮುಗಳ ಸಂಬಂಧದಲ್ಲಿ ಅರಮನೆಯ ಬಗೆಗಿನ ಹೊಣೆಗಾರಿಕೆಗಳು ಮುಕ್ತವಾಗತಕ್ಕದ್ದು.

**21. ಹಂಚಿಕೆ ಮಾಡದ ಅಥವಾ ಕ್ಲೇಮು ಮಾಡದ ಮೊಬಲಗಿನ ಹಣವನ್ನು ಸಾಮಾನ್ಯ ಕಂದಾಯ ಖಾತೆಗೆ ಜಮೆ ಮಾಡತಕ್ಕದ್ದು.**– ಕಮಿಷನರಿಗೆ ಸಂದಾಯ ಮಾಡಿದ ಯಾವುದೇ ಮೊಬಲಗಿನ ಪೈಕಿ ಕಮಿಷನರ ಹುದ್ದೆಯನ್ನು ಅಂತಿಮವಾಗಿ ಕೊನೆಗೊಳಿಸುವ ದಿನಾಂಕಕ್ಕೆ ನಿಕಟಪೂರ್ವ ದಿನಾಂಕದಂದು ಹಂಚಿಕೆ ಮಾಡಿಲ್ಲದೆ ಅಥವಾ ಕ್ಲೇಮು ಮಾಡಿಲ್ಲದೆ ಉಳಿದಿರುವ ಮೊಬಲಗನ್ನು ಕಮಿಷನರು ರಾಜ್ಯ ಸರ್ಕಾರದ ಸಾಮಾನ್ಯ ಕಂದಾಯ ಖಾತೆಗೆ ವರ್ಗಾಯಿಸತಕ್ಕದ್ದು, ಆದರೆ ಹಾಗೆ ವರ್ಗಾಯಿಸಲಾದ ಯಾವುದೇ ಮೊಬಲಗಿನ ಬಗೆಗಿನ ಕ್ಲೇಮನ್ನು ಅಂಥ ಸಂದಾಯಕ್ಕೆ ಹಕ್ಕುಳ್ಳ ವ್ಯಕ್ತಿಯು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಅಂಥ ವರ್ಗಾವಣೆ ಮಾಡಿಲ್ಲದಿದ್ದರೆ ಹೇಗೋ ಹಾಗೆ ವ್ಯವಹರಿಸತಕ್ಕದ್ದು ಮತ್ತು ಕ್ಲೇಮಿನ ಸಂದಾಯಕ್ಕಾಗಿ ಮಾಡಲಾಗುವ ಆದೇಶ ಯಾವುದಾದರೂ ಇದ್ದಲ್ಲಿ ಅದನ್ನು ಕಂದಾಯದ ಮರುಪಾವತಿಗಾಗಿ ಮಾಡಿದ ಆದೇಶದಂತೆ ಭಾವಿಸತಕ್ಕದ್ದು.

## ಅಧ್ಯಾಯ V

## ಟ್ರಸ್ಟಿಗಳ ಮಂಡಲಿ

**22. ಟ್ರಸ್ಟಿಗಳ ಮಂಡಲಿ.**– (1) ಅರಮನೆಯ ಆಡಳಿತ ಮತ್ತು ನಿರ್ವಹಣೆಗಾಗಿ ಕೆಳಕಂಡವರನ್ನು ಒಳಗೊಂಡ ಒಂದು ಟ್ರಸ್ಟಿಗಳ ಮಂಡಲಿ ಇರತಕ್ಕದ್ದು :–

| | | |
|---|---|---|
| (1) | ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ | ಅಧ್ಯಕ್ಷರು |
| (2) | ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ | ಸದಸ್ಯ |
| (3) | ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ | ಸದಸ್ಯ |
| (4) | ಹಣಕಾಸು ಇಲಾಖೆಯ ಪ್ರಭಾರದಲ್ಲಿರುವ ಕಾರ್ಯದರ್ಶಿ | ಸದಸ್ಯ |
| (5) | ಸರ್ಕಾರದ ಕಾರ್ಯದರ್ಶಿ, ಕಾನೂನು ಇಲಾಖೆ | ಸದಸ್ಯ |
| (6) | ಅರಣ್ಯ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ | ಸದಸ್ಯ |
| (7) | ತೋಟಗಾರಿಕೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ | ಸದಸ್ಯ |
| (8) | ಸರ್ಕಾರದ ಕಾರ್ಯದರ್ಶಿ, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆ | ಸದಸ್ಯ |
| (9) | ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರು | ಸದಸ್ಯ |
| (10) | ಕಾರ್ಯನಿರ್ವಾಹಕ ಅಧಿಕಾರಿ | ಸದಸ್ಯ– ಕಾರ್ಯದರ್ಶಿ |

(2) ಮಂಡಲಿಯು ನಿಯಮಿಸಬಹುದಾದ ಅಂಥ ಸಮಯ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು ಮತ್ತು ಅಂಥ ರೀತಿಯಲ್ಲಿ ತನ್ನ ಕಾರ್ಯಕಲಾಪ ನಡೆಸತಕ್ಕದ್ದು.

**23. ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು.**– ಈ ಅಧಿನಿಯಮದ ಅಡಿಯಲ್ಲಿ ಮಾಡಿದ ನಿಯಮಗಳಿಗೊಳಪಟ್ಟು ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು ಈ ಮುಂದಿನಂತಿರತಕ್ಕದ್ದು, ಎಂದರೆ:–

(ಎ) ಅರಮನೆಯ ಆಡಳಿತ ಮತ್ತು ನಿರ್ವಹಣೆ ;

(ಬಿ) ಅರಮನೆಯಲ್ಲಿ ಸಾರ್ವಜನಿಕ ಉದ್ಯಾನವನಗಳನ್ನು ರೂಪಿಸುವುದು ಮತ್ತು ನಿರ್ವಹಿಸುವುದು ಮತ್ತು ಅಲ್ಲಿರುವ ಮರಗಳನ್ನು ಸಂರಕ್ಷಿಸುವುದು ;

(ಸಿ) ಅರಮನೆಯ ಸುತ್ತ ಇರುವ ಭೂಮಿಯನ್ನು ಸಂಪೂರ್ಣವಾಗಿ ವೃಕ್ಷೋದ್ಯಾನವನ್ನಾಗಿ ಮತ್ತು ತೋಟಗಾರಿಕೆ ಉದ್ಯಾನವನ್ನಾಗಿ ಹಾಗೂ ಸಸ್ಯ ಸಂಗ್ರಹಾಲಯವನ್ನಾಗಿ ಬಳಸಿಕೊಳ್ಳುವುದು ಅಥವಾ ಭಾಗಶಃ ಆ ಉದ್ದೇಶಕ್ಕಾಗಿ ಮತ್ತು ಭಾಗಶಃ ನಾಗರಿಕ ಜೀವನಕ್ಕೆ ಅಗತ್ಯವಾದ ಯಾವುದೇ ಇತರ ಸಾರ್ವಜನಿಕ ಉದ್ದೇಶಕ್ಕಾಗಿ ಬಳಸಿಕೊಳ್ಳುವುದು ;

(ಡಿ) ರಾಜ್ಯ ಸರ್ಕಾರವು ವಿಧಿಸಬಹುದಾದ ಅಂಥ ಷರತ್ತುಗಳಿಗೊಳಪಟ್ಟು ಅರಮನೆಗೆ ಮತ್ತು ಉದ್ಯಾನಗಳು, ತೋಟಗಾರಿಕೆ ಉದ್ಯಾನ ಮತ್ತು ಸಸ್ಯ ಸಂಗ್ರಹಾಲಯಕ್ಕೆ ಪ್ರವೇಶ ಶುಲ್ಕವನ್ನು ವಿಧಿಸುವುದು;

(ಇ) ಮಂಡಲಿಯು ಅರಮನೆಯ ದಕ್ಷ ಆಡಳಿತಕ್ಕಾಗಿ ನಿಯಮಿಸಬಹುದಾದ ಮತ್ತು ಅದಕ್ಕೆ ಪ್ರಾಸಂಗಿಕವಾದ ಅಥವಾ ಸಹಾಯಕವಾದ ಇತರ ಅಂಥ ಯಾವುದೇ ಕೃತ್ಯಗಳನ್ನು ಮಾಡುವುದು.

**24. ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳ ನೇಮಕ.-** (1) ರಾಜ್ಯ ಸರ್ಕಾರವು ಮಂಡಲಿಗೆ ಒಬ್ಬ ಕಾರ್ಯನಿರ್ವಾಹಕ ಅಧಿಕಾರಿಯನ್ನು ಮತ್ತು ಅವನಿಗೆ ಸಹಾಯ ಮಾಡಲು ತಾನು ಅವಶ್ಯವೆಂದು ಭಾವಿಸುವಷ್ಟು ಸಂಖ್ಯೆಯ ಇತರ ಅಧಿಕಾರಿಗಳನ್ನು ನೇಮಕ ಮಾಡತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ನೇಮಕ ಮಾಡಲಾದ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳಿಗೆ ಸಂದಾಯಮಾಡಬಹುದಾದ ವೇತನ ಮತ್ತು ಭತ್ಯೆಗಳನ್ನು ಮಂಡಲಿಯ ನಿಧಿಯಿಂದ ಭರಿಸತಕ್ಕದ್ದು.

(3) ರಾಜ್ಯ ಸರ್ಕಾರವು ನೇಮಕ ಮಾಡಿದ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳನ್ನು 1860 ರ ದಂಡಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಬರುವ ಲೋಕನೌಕರರೆಂಬುದಾಗಿ ಭಾವಿಸತಕ್ಕದ್ದು.

**25. ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು.-** (1) ರಾಜ್ಯ ಸರ್ಕಾರವು ನಿಯಮಗಳ ಮೂಲಕ ಅಥವಾ ಯಾವುದೇ ಸಾಮಾನ್ಯ ಅಥವಾ ವಿಶೇಷ ಆದೇಶಗಳ ಮೂಲಕ ವಿಧಿಸಬಹುದಾದ ನಿರ್ಬಂಧಗಳು ಮತ್ತು ಷರತ್ತುಗಳಿಗೊಳಪಟ್ಟು ಮತ್ತು ಮಂಡಲಿಯ ಸಾಮಾನ್ಯ ನಿಯಂತ್ರಣಕ್ಕೊಳಪಟ್ಟು ಕಾರ್ಯನಿರ್ವಾಹಕ ಅಧಿಕಾರಿಯು,-

(ಎ) ಮಂಡಲಿಯ ವ್ಯವಹಾರಗಳ ನಿರ್ವಹಣೆಯ ಅಧಿಕಾರವನ್ನು ಹೊಂದಿರತಕ್ಕದ್ದು ;

(ಬಿ) ಮಂಡಲಿಯ ಸ್ವತ್ತುಗಳು, ದಾಖಲೆಗಳು, ಹಣ, ಚಿತ್ರಕಲೆಗಳು, ನಿಧಿಗಳು ಮತ್ತು ಮಂಡಲಿಗೆ ಸೇರಿದ ಇತರ ಅಮೂಲ್ಯ ವಸ್ತುಗಳ ಯುಕ್ತ ಸ್ವಾಧೀನತೆಯನ್ನು ಹೊಂದಿರಲು ಜವಾಬ್ದಾರನಾಗಿರತಕ್ಕದ್ದು ;

(ಸಿ) ಮಂಡಲಿಯ ಆದಾಯಗಳ ಸೂಕ್ತ ವಸೂಲಿಗೆ ಮತ್ತು ವೆಚ್ಚಗಳನ್ನು ಭರಿಸಲು ಏರ್ಪಾಡು ಮಾಡತಕ್ಕದ್ದು.

(2) ಕಾರ್ಯನಿರ್ವಾಹಕ ಅಧಿಕಾರಿಯು, ತುರ್ತು ಪರಿಸ್ಥಿತಿಯಲ್ಲಿ, ವರ್ಷದ ಬಜೆಟ್ಟಿನಲ್ಲಿ ಹಣ ಒದಗಿಸಿಲ್ಲದ ಮತ್ತು ಯಾವುದೇ ಕೃತ್ಯವನ್ನು ತಕ್ಷಣ ಮಾಡುವುದು ಮಂಡಲಿಯ ಸ್ವತ್ತುಗಳ ಸಂರಕ್ಷಣೆಗೆ, ಅವಶ್ಯಕವೆಂದು ಅವನು ಅಭಿಪ್ರಾಯಪಡುವಂಥ ಯಾವುದೇ ಕಾಮಗಾರಿಯನ್ನು ಅಥವಾ ಯಾವುದೇ ಕೃತ್ಯವನ್ನು ಮಾಡಲು ನಿರ್ದೇಶನ ನೀಡಬಹುದು ಮತ್ತು ಅಂಥ ಕಾಮಗಾರಿಯ ನಿರ್ವಹಣೆ ಅಥವಾ ಕೃತ್ಯವನ್ನು ಮಾಡಲು ತಗಲುವ ವೆಚ್ಚವನ್ನು ಮಂಡಲಿಯ ನಿಧಿಯಿಂದ ಸಂದಾಯ ಮಾಡತಕ್ಕದ್ದೆಂದು ನಿರ್ದೇಶನ ನೀಡಬಹುದು:

ಪರಂತು, ಕಾರ್ಯನಿರ್ವಾಹಕ ಅಧಿಕಾರಿಯು ಈ ಉಪ-ಪ್ರಕರಣದ ಅಡಿಯಲ್ಲಿ ಕೈಗೊಂಡ ಯಾವುದೇ ಕ್ರಮದ ಬಗ್ಗೆ ಮತ್ತು ಅದಕ್ಕೆ ಕಾರಣಗಳನ್ನು ಕೂಡಲೇ ಮಂಡಲಿಗೆ ವರದಿ ಮಾಡತಕ್ಕದ್ದು.

(3) ಕಾರ್ಯನಿರ್ವಾಹಕ ಅಧಿಕಾರಿಯು 24 ನೇ ಪ್ರಕರಣದ ಅಡಿಯಲ್ಲಿ ಅವನಿಗೆ ಸಹಾಯ ಮಾಡಲು ನೇಮಕ ಮಾಡಲಾದ ಯಾರೇ ಅಧಿಕಾರಿಗೆ, ಮಂಡಲಿಯು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ವಿಧಿಸಬಹುದಾದ ಅಂಥ ನಿರ್ಬಂಧ ಮತ್ತು ಷರತ್ತುಗಳಿಗೊಳಪಟ್ಟು ಮತ್ತು ಪ್ರತ್ಯಾಯೋಜಿತ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಪರಿಮಿತಿಗಳು ಮತ್ತು ಷರತ್ತುಗಳು ಯಾವುವಾದರೂ ಇದ್ದರೆ ಅವುಗಳಿಗೊಳಪಟ್ಟು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅವನಿಗೆ ಪ್ರದತ್ತವಾದ ಯಾವುವೇ ಅಧಿಕಾರಗಳು ಮತ್ತು ವಿಧಿಸಿದ ಯಾವುವೇ ಕರ್ತವ್ಯಗಳನ್ನು ಪ್ರತ್ಯಾಯೋಜಿಸಬಹುದು.

(4) ಮಂಡಲಿಯು, ನಿಯಮಿಸಬಹುದಾದಂಥ ಅದರ ಅಧಿಕಾರಗಳು, ಕರ್ತವ್ಯಗಳು ಅಥವಾ ಪ್ರಕಾರ್ಯಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

**26. ಮಂಡಲಿಯಿಂದ ಅಥವಾ ಮಂಡಲಿಯ ವಿರುದ್ಧ ಹೂಡಲಾಗುವ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳು.-** ಮಂಡಲಿಯು ಹೂಡಿದ ಅಥವಾ ಮಂಡಲಿಯ ವಿರುದ್ಧ ಹೂಡಲಾದ ಎಲ್ಲ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ ವಾದಪತ್ರಕ್ಕೆ ಕಾರ್ಯನಿರ್ವಾಹಕ ಅಧಿಕಾರಿಯು ಸಹಿ ಮಾಡತಕ್ಕದ್ದು ಮತ್ತು ಅದರ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂಥ ದಾವೆಗಳಲ್ಲಿನ ಮತ್ತು ಕಾನೂನು ವ್ಯವಹರಣೆಗಳಲ್ಲಿನ ಎಲ್ಲಾ ಪ್ರಕ್ರಿಯೆಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗೆ ನೀಡತಕ್ಕದ್ದು ಅಥವಾ ಅವನಿಗೆ ಜಾರಿ ಮಾಡತಕ್ಕದ್ದು.

**27. ನಿಧಿ.**- (1) ಮಂಡಲಿಯ ನಿಧಿ ಎಂದು ಕರೆಯಲಾಗುವ, ಮಂಡಲಿಯಿಂದ ನಿರ್ವಹಿಸಲಾಗುವ ಒಂದು ನಿಧಿ ಇರತಕ್ಕದ್ದು.

(2) ಈ ಮುಂದಿನವುಗಳು ಮಂಡಲಿಯ ನಿಧಿಯ ಒಂದು ಭಾಗವಾಗಿರತಕ್ಕದ್ದು ಅಥವಾ ಅವುಗಳನ್ನು ಅದಕ್ಕೆ ಸಂದಾಯ ಮಾಡತಕ್ಕದ್ದು, ಎಂದರೆ :-

(i) ಮಂಡಲಿಯಲ್ಲಿ ನಿಹಿತವಾಗಿರುವ ಅರಮನೆಯಿಂದ ಬರುವ ಆದಾಯ ಅಥವಾ ಯಾವುದೇ ಸ್ವತ್ತಿನ ಉತ್ಪತ್ತಿ ;

(ii) ಈ ಅಧಿನಿಯಮದ ಅಡಿಯಲ್ಲಿ ಮಂಡಲಿಯು ಅಥವಾ ಮಂಡಲಿಯ ಪರವಾಗಿ ಸಂದಾಯ ಮಾಡಿದ ಅಥವಾ ವಸೂಲಿ ಮಾಡಿದ ಎಲ್ಲಾ ಫೀಜುಗಳು ಮತ್ತು ಚಾರ್ಜುಗಳು;

(iii) ರಾಜ್ಯ ಸರ್ಕಾರ ಅಥವಾ ಯಾವುದೇ ಇತರ ಪ್ರಾಧಿಕಾರ ನೀಡಿದ ಎಲ್ಲ ಅನುದಾನಗಳು ;

(iv) ಯಾವೊಬ್ಬ ವ್ಯಕ್ತಿಯು ನೀಡಿದ ಎಲ್ಲ ವಂತಿಗೆಗಳು ಮತ್ತು ದೇಣಿಗೆಗಳು ;

(v) ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮಂಡಲಿಯಿಂದ ಸಾಲದ ರೂಪದಲ್ಲಿ ಪಡೆದ ಮೊತ್ತ ; ಮತ್ತು

(vi) ಯಾವುವೇ ಇತರ ಮೊತ್ತಗಳು.

**28. ಸಾಲ ತೆಗೆದುಕೊಳ್ಳಲು ಅಧಿಕಾರ.**- ಮಂಡಲಿಯು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮತ್ತು ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ಈ ಅಧಿನಿಯಮದ ಉದ್ದೇಶಗಳಿಗಾಗಿ ಯಾವುದೇ ಮೊಬಲಗನ್ನು ಸಾಲವಾಗಿ ತೆಗೆದುಕೊಳ್ಳಬಹುದು.

**29. ನಿಧಿಯ ಬಳಕೆ.**- ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ಉದ್ದೇಶಗಳಿಗಾಗಿ ನಿಧಿಯನ್ನು ಬಳಸಬಹುದು, ಎಂದರೆ:-

(i) ಅರಮನೆಯ ನಿರ್ವಹಣೆ, ವ್ಯವಸ್ಥಾಪನೆ ಮತ್ತು ಆಡಳಿತ ;

(ii) ಸಾರ್ವಜನಿಕ ಉದ್ಯಾನವನವನ್ನು ರೂಪಿಸುವುದು, ನಿರ್ವಹಿಸುವುದು;

(iii) ಅರಮನೆಯ ಆವರಣದೊಳಗೆ ಬೆಳೆದಿರುವ ಗಿಡಮರಗಳ ಸಂರಕ್ಷಣೆ;

(iv) ಅರಮನೆಯ ಆವರಣದಲ್ಲಿ ಸಸ್ಯಸಂಗ್ರಹಾಲಯ ಮತ್ತು ತೋಟಗಾರಿಕೆ ವನದ ಅಭಿವೃದ್ಧಿ;

(v) 24 ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇತರ ಅಧಿಕಾರಿಗಳ ವೇತನಗಳು ಮತ್ತು ಭತ್ಯೆಗಳ ಸಂದಾಯ ;

(vi) ನಿಯಮಿಸಬಹುದಾದಂಥ ಯಾವುವೇ ಇತರ ಉದ್ದೇಶಗಳು.

**30. ಲೆಕ್ಕಪರಿಶೋಧನೆ** .- (1) ರಾಜ್ಯ ಸರ್ಕಾರವು, ಪ್ರತಿವರ್ಷ, ಮಂಡಲಿಯ ಲೆಕ್ಕಪತ್ರಗಳನ್ನು ಪರಿಶೀಲಿಸಲು ಒಬ್ಬ ಲೆಕ್ಕ ಪರಿಶೋಧಕನನ್ನು ನೇಮಿಸತಕ್ಕದ್ದು ಮತ್ತು ಅವನಿಗೆ ಪರಿಶ್ರಮಧನವನ್ನು ನಿಗದಿಪಡಿಸುವುದು. ಅದನ್ನು ಮಂಡಲಿಯ ನಿಧಿಯಿಂದ ಸಂದಾಯ ಮಾಡತಕ್ಕದ್ದು. ಲೆಕ್ಕಪರಿಶೋಧಕನು ತನ್ನ ವರದಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(2) ರಾಜ್ಯ ಸರ್ಕಾರವು, ಲೆಕ್ಕಪರಿಶೋಧನೆಯ ವರದಿಯ ಒಂದು ಪ್ರತಿಯನ್ನು ಮಂಡಲಿಗೆ ಕಳುಹಿಸತಕ್ಕದ್ದು ಮತ್ತು ಲೆಕ್ಕಪರಿಶೋಧಕನು ಗುರುತಿಸಿದ ಯಾವುದೇ ನ್ಯೂನತೆ ಅಥವಾ ಕ್ರಮದೋಷಗಳ ಬಗ್ಗೆ ರಾಜ್ಯ ಸರ್ಕಾರದಿಂದ ನಿರ್ದಿಷ್ಟಪಡಿಸಬಹುದಾದ ಅಂಥ ಸಮಯದೊಳಗೆ ಅದಕ್ಕೆ ಪರಿಹಾರ ನೀಡುವುದು ಮಂಡಲಿಯ ಕರ್ತವ್ಯವಾಗಿರತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

**31. ಬಜೆಟ್.**- ಕಾರ್ಯನಿರ್ವಾಹಕ ಅಧಿಕಾರಿಯು ಪ್ರತಿವರ್ಷವೂ, ನಿಗದಿಪಡಿಸಬಹುದಾದಂಥ ಸಮಯದೊಳಗೆ ಮತ್ತು ಅಂಥ ನಮೂನೆಯಲ್ಲಿ ಬಜೆಟ್ಟನ್ನು ಮತ್ತು ಮುಂಬರುವ ವರ್ಷಕ್ಕಾಗಿ ಮಂಡಲಿಯ ಆದಾಯಗಳ ಮತ್ತು ವೆಚ್ಚಗಳ ಒಂದು ಅಂದಾಜನ್ನು ತಯಾರಿಸತಕ್ಕದ್ದು ಮತ್ತು ಅದನ್ನು ಮಂಡಲಿಯ ಮುಂದೆ ಇಡತಕ್ಕದ್ದು.

ಮಂಡಲಿಯು ಅದನ್ನು ಯಾವುದೇ ಮಾರ್ಪಾಟುಗಳಿಲ್ಲದೆ ಅಥವಾ ಅದು ಸೂಕ್ತವೆಂದು ಭಾವಿಸಬಹುದಾದ ಅಂಥ ಮಾರ್ಪಾಟುಗಳೊಂದಿಗೆ ಅನುಮೋದಿಸಬಹುದು.

(2) ಮಂಡಲಿಯು ಅನುಮೋದಿಸಿದ ಬಜೆಟ್‌ನ ಒಂದು ಪ್ರತಿಯನ್ನು ಯಾವ ವರ್ಷಕ್ಕೆ ಬಜೆಟ್‌ನ್ನು ತಯಾರಿಸಲಾಗಿದೆಯೋ ಆ ವರ್ಷದ ಹಿಂದಿನ ವರ್ಷ ಮುಕ್ತಾಯವಾಗುವುದಕ್ಕೆ ಎರಡು ತಿಂಗಳ ಮೊದಲು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

## ಅಧ್ಯಾಯ VI

### ಸಂಕೀರ್ಣ

**32. ಅಧಿನಿಯಮವು ಅಧ್ಯಾರೋಹಿ ಪರಿಣಾಮವನ್ನು ಹೊಂದಿರುವುದು .-** ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ಈ ಅಧಿನಿಯಮದ ಹೊರತು ಇತರ ಯಾವುದೇ ಕಾನೂನಿನ ಅಥವಾ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಯಾವುದೇ ಪ್ರಾಧಿಕಾರದ ಯಾವುದೇ ಡಿಕ್ರಿ ಅಥವಾ ಆದೇಶದ ಬಲದಿಂದ ಪರಿಣಾಮಕಾರಿಯಾದ ಯಾವುದೇ ಲಿಖಿತದಲ್ಲಿ ಅಸಂಗತವಾಗಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು.

**33. ಮಂಡಲಿಯಿಂದ ಸ್ಥಿರೀಕರಿಸಿದ ಹೊರತು ಕರಾರು ಪರಿಣಾಮಕಾರಿಯಾಗಿರುವುದು ನಿಂತುಹೋಗುವುದು .-** 4ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರದಲ್ಲಿ ನಿಹಿತಗೊಂಡ ಅರಮನೆಗೆ ಸಂಬಂಧಪಟ್ಟಂತೆ ಕಾನೂನುಸಮ್ಮತ ಪ್ರತಿನಿಧಿಗಳು ಅಥವಾ ವಾರಸುದಾರರು ಅಥವಾ ಇತರ ವ್ಯಕ್ತಿಗಳು ಮಾಡಿಕೊಂಡ ಮತ್ತು ಗೊತ್ತುಪಡಿಸಿದ ದಿನಾಂಕದ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಪ್ರತಿಯೊಂದು ಕರಾರು ಗೊತ್ತುಪಡಿಸಿದ ದಿನಾಂಕದಿಂದ ಮೂವತ್ತು ದಿನಗಳು ಮುಕ್ತಾಯವಾಗುವ ದಿನಾಂಕದಂದು ಮತ್ತು ಅಂದಿನಿಂದ, ಅಂಥ ಕರಾರನ್ನು ಆ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಮಂಡಲಿಯಿಂದ ಲಿಖಿತದಲ್ಲಿ ಸ್ಥಿರೀಕರಿಸಿದ ಹೊರತು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು ಮತ್ತು ಅಂಥ ಕರಾರನ್ನು ಸ್ಥಿರೀಕರಿಸುವಲ್ಲಿ ಮಂಡಲಿಯು ತಾನು ಸೂಕ್ತವೆಂದು ಭಾವಿಸಿದ ಅಂಥ ಬದಲಾಣೆಗಳನ್ನು ಅಥವಾ ಮಾರ್ಪಾಡುಗಳನ್ನು ಮಾಡಬಹುದು:

ಪರಂತು,-

(ಎ) ಅಂಥ ಕರಾರು ಅನುಚಿತ ಹೊಣೆಯುಳ್ಳದ್ದಾಗಿದೆ ಅಥವಾ ಅದನ್ನು ದುರುದ್ದೇಶದಿಂದ ಮಾಡಿಲಾಗಿದೆ ಅಥವಾ ಮಂಡಲಿಯ ಹಿತಾಸಕ್ತಿಗೆ ಹಾನಿಕರವಾಗಿದೆ ಎಂದು ಮನವರಿಕೆಯಾದ ಹೊರತು ; ಮತ್ತು

(ಬಿ) ಕರಾರಿನ ಪಕ್ಷಕಾರರಿಗೆ ಹೇಳಿಕೆಯನ್ನು ನೀಡಲು ಸೂಕ್ತ ಅವಕಾಶವನ್ನು ನೀಡಿದ ಹೊರತು ಮತ್ತು ಕರಾರನ್ನು ಸ್ಥಿರೀಕರಿಸಲು, ನಿರಾಕರಿಸಲು ಅಥವಾ ಅದರಲ್ಲಿ ಯಾವುದೇ ಬದಲಾವಣೆ ಅಥವಾ ಮಾರ್ಪಾಟನ್ನು ಮಾಡಲು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿದ ಹೊರತು,

-ಮಂಡಲಿಯು ಕರಾರಿನ ಸ್ಥಿರೀಕರಣ ಮಾಡುವುದನ್ನು ಲೋಪಿಸತಕ್ಕದ್ದಲ್ಲ ಮತ್ತು ಯಾವುದೇ ಬದಲಾವಣೆ ಅಥವಾ ಮಾರ್ಪಾಟನ್ನು ಮಾಡತಕ್ಕದ್ದಲ್ಲ.

**34. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.-** (1) ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ ರಾಜ್ಯ ಸರ್ಕಾರದ ಅಥವಾ ಮಂಡಲಿಯ ವಿರುದ್ಧ ಅಥವಾ ರಾಜ್ಯ ಸರ್ಕಾರದ ಅಥವಾ ಮಂಡಲಿಯ ಯಾವೊಬ್ಬ ಅಧಿಕಾರಿ ಅಥವಾ ಇತರ ನೌಕರನ ವಿರುದ್ಧ ಅಥವಾ ರಾಜ್ಯ ಸರ್ಕಾರದಿಂದ ಅಥವಾ ಮಂಡಲಿಯಿಂದ ಪ್ರಾಧಿಕೃತನಾದ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

(2) ಸದಾ ್ಭವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯದಿಂದ ಉಂಟಾದ ನಷ್ಟಕ್ಕಾಗಿ ರಾಜ್ಯ ಸರ್ಕಾರದ ಅಥವಾ ಮಂಡಳಿಯ ವಿರುದ್ಧ ಅಥವಾ ರಾಜ್ಯ ಸರ್ಕಾರದ ಅಥವಾ ಮಂಡಲಿಯ ಯಾವೊಬ್ಬ ಅಧಿಕಾರಿ ಅಥವಾ ಇತರ ನೌಕರನ ವಿರುದ್ಧ ಅಥವಾ ರಾಜ್ಯ ಸರ್ಕಾರದಿಂದ ಅಥವಾ ಮಂಡಲಿಯಿಂದ ಪ್ರಾಧಿಕೃತನಾದ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**35. ದಂಡನೆಗಳು.-** ಯಾವನೇ ವ್ಯಕ್ತಿಯು, ಅವನು ,-

(ಎ) ಅರಮನೆಯ ಒಂದು ಭಾಗವಾಗಿರುವ ಯಾವುದೇ ಸ್ವತ್ತನ್ನು ತನ್ನ ಸ್ವಾಧೀನತೆಯಲ್ಲಿ, ಅಭಿರಕ್ಷೆಯಲ್ಲಿ ಅಥವಾ ನಿಯಂತ್ರಣದಲ್ಲಿ ಹೊಂದಿದ್ದು ಅಂಥ ಸ್ವತ್ತನ್ನು ರಾಜ್ಯ ಸರ್ಕಾರ ಅಥವಾ ಮಂಡಲಿಗೆ ಒಪ್ಪಿಸದಿದ್ದರೆ ; ಅಥವಾ

(ಬಿ) ಅರಮನೆಯ ಒಂದು ಭಾಗವಾಗಿರುವ ಯಾವುದೇ ಸ್ವತ್ತನ್ನು ಅಕ್ರಮವಾಗಿ ಸ್ವಾಧೀನಕ್ಕೆ ಪಡೆದರೆ ಅಥವಾ ಸ್ವಾಧೀನದಲ್ಲಿಟ್ಟುಕೊಂಡರೆ ; ಅಥವಾ

(ಸಿ) ತನ್ನ ಸ್ವಾಧೀನತೆ, ಅಭಿರಕ್ಷೆ ಅಥವಾ ನಿಯಂತ್ರಣದಲ್ಲಿರುವ ಅರಮನೆಗೆ ಸಂಬಂಧಿಸಿದ ಯಾವುದೇ ದಸ್ತಾವೇಜು ಅಥವಾ ಆಸ್ತಿ ವಿವರಣಾ ಪಟ್ಟಿಯನ್ನು ರಾಜ್ಯ ಸರ್ಕಾರಕ್ಕೆ ಅಥವಾ ಮಂಡಲಿಗೆ ಅಥವಾ ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರವಾಗಿ ಮಂಡಲಿಯಿಂದ ನಿರ್ದಿಷ್ಟಪಡಿಸಿದ ಯಾವೊಬ್ಬ ವ್ಯಕ್ತಿಗೆ ಅಥವಾ ವ್ಯಕ್ತಿಗಳ ನಿಕಾಯಕ್ಕೆ ಉದ್ದೇಶಪೂರ್ವಕವಾಗಿ ಒಪ್ಪಿಸದಿದ್ದರೆ ಅಥವಾ ಒದಗಿಸಲು ತಪ್ಪಿದರೆ ; ಅಥವಾ

(ಡಿ) ಅರಮನೆಯ ಒಂದು ಭಾಗವಾಗಿರುವ ಯಾವುದೇ ಸ್ವತ್ತನ್ನು ಅಕ್ರಮವಾಗಿ ತೆಗೆದರೆ ಅಥವಾ ನಾಶಪಡಿಸಿದರೆ; ಅಥವಾ

(ಇ) ಸುಳ್ಳೆಂದು ಅಥವಾ ಒಟ್ಟಾರೆ ಸಮರ್ಪಕವಾಗಿಲ್ಲವೆಂದು ಅವನಿಗೆ ತಿಳಿದಿದ್ದು ಅಥವಾ ಹಾಗೆ ನಂಬಲು ಸಾಕಷ್ಟು ಕಾರಣಗಳಿರುವ ಸ್ವತ್ತಿನ ಬಗ್ಗೆ ಈ ಅಧಿನಿಯಮದ ಅಡಿಯಲ್ಲಿ ಕ್ಲೇಮು ಸಲ್ಲಿಸಿದರೆ ;

– ಅವನು ಎರಡು ವರ್ಷಗಳ ಅವಧಿಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

**36. ಕಂಪನಿಗಳಿಂದ ಅಪರಾಧಗಳು.**– (1) ಕಂಪನಿಯು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಅಪರಾಧವನ್ನು ಮಾಡಿರುವಲ್ಲಿ, ಅಪರಾಧವು ನಡೆದ ಸಮಯದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಪಡಿಸತಕ್ಕದ್ದು:

ಪರಂತು, ಅಪರಾಧವು ತನ್ನ ತಿಳಿವಳಿಕೆಗೆ ಬಾರದೇ ನಡೆಯಿತೆಂದು ಅಥವಾ ಅಂಥ ಅಪರಾಧವನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಈ ಉಪ-ಪ್ರಕರಣದಲ್ಲಿರುವುದಾವುದೂ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಕಂಪನಿಯು ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧವನ್ನು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ ಅಥವಾ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ಹೇಳಬಹುದಾದಲ್ಲಿ ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

***ವಿವರಣೆ*** :– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ ; ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ಫರ್ಮಿನ ಪಾಲುದಾರ.

**37. ಪರಿಷ್ಕರಣೆ** .– (1) ರಾಜ್ಯ ಸರ್ಕಾರವು ಯಾವುದೇ ವ್ಯವಹರಣೆಗೆ ಸಂಬಂಧಪಟ್ಟ ಮಂಡಲಿಯ ಅಥವಾ ಕಾರ್ಯನಿರ್ವಾಹಕ ಅಧಿಕಾರಿಯ ದಾಖಲೆಗಳನ್ನು, ಅಂಥ ವ್ಯವಹರಣೆಗಳ ಕ್ರಮಬದ್ಧತೆ ಅಥವಾ ಅದರಲ್ಲಿ ನೀಡಲಾದ ತೀರ್ಮಾನ ಅಥವಾ ಆದೇಶದ ಸೂಕ್ತತೆ, ಕಾನೂನುಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವುದಕ್ಕಾಗಿ ತರಿಸಿಕೊಳ್ಳಬಹುದು ಮತ್ತು ಪರಿಶೀಲಿಸಬಹುದು.

(2) ರಾಜ್ಯ ಸರ್ಕಾರಕ್ಕೆ ತೀರ್ಮಾನವನ್ನು ಅಥವಾ ಆದೇಶವನ್ನು ಮಾರ್ಪಾಟು, ರದ್ದು ಅಥವಾ ಮಾಫಿ ಮಾಡಬೇಕೆಂದು ಅಥವಾ ಮತ್ತೆ ಪರಿಶೀಲಿಸಬೇಕೆಂದು ಕಂಡುಬಂದರೆ, ಅದು ತದನುಸಾರವಾಗಿ ಆದೇಶ ನೀಡಬಹುದು.

(3) ರಾಜ್ಯ ಸರ್ಕಾರವು ಯಾವೊಬ್ಬ ಪಕ್ಷಕಾರನಿಗೆ ಅವನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು (2) ನೇ ಉಪ ಪ್ರಕರಣದ ಅಡಿಯಲ್ಲಿ ಅವನಿಗೆ ಬಾಧಕವಾಗುವ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(4) ರಾಜ್ಯ ಸರ್ಕಾರವು (1) ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಸ್ವರೂಪದ ಯಾವುದೇ ತೀರ್ಮಾನ ಅಥವಾ ಆದೇಶದ ಜಾರಿಯನ್ನು (2) ನೇ ಉಪ ಪ್ರಕರಣದ ಅಡಿಯಲ್ಲಿ ಅದರ ಅಧಿಕಾರ ಚಲಾವಣೆಯು ಇತ್ಯರ್ಥದಲ್ಲಿರುವಾಗ, ತಡೆಹಿಡಿಯಬಹುದು.

**38. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಎಲ್ಲಾ ಅಥವಾ ಯಾವುವೇ ಉದ್ದೇಶಗಳನ್ನು ಈಡೇರಿಸಲು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುವಾದರೂ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ :-

(ಎ) 5ನೇ ಪ್ರಕರಣದ (4)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಮಾಹಿತಿಯನ್ನು ನೀಡತಕ್ಕ ಸಮಯ ಮತ್ತು ವಿಧಾನ ;

(ಬಿ) 22 ನೇ ಪ್ರಕರಣದ ಅಡಿಯಲ್ಲಿ ಮಂಡಲಿಯ ಸಭೆಗಳನ್ನು ಕರೆಯುವುದು ಮತ್ತು ಕಾರ್ಯಕಲಾಪಗಳ ಬಗ್ಗೆ ವ್ಯವಹರಿಸುವುದು ;

(ಸಿ) 25 ನೇ ಪ್ರಕರಣದ ಅಡಿ ಕಾರ್ಯನಿರ್ವಾಹಕ ಅಧಿಕಾರಿಯು ಯಾವ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ತನ್ನ ಅಧಿಕಾರಗಳನ್ನು ಚಲಾಯಿಸಬಹುದೋ ಮತ್ತು ತನ್ನ ಕರ್ತವ್ಯಗಳನ್ನು ನಿರ್ವಹಿಸಬಹುದೋ ಆ ನಿರ್ಬಂಧ ಮತ್ತು ಷರತ್ತುಗಳು ;

(ಡಿ) 28 ನೇ ಪ್ರಕರಣದ ಅಡಿ ಯಾವುದೇ ಮೊಬಲಗನ್ನು ಮಂಡಲಿಯು ಸಾಲವಾಗಿ ಪಡೆಯಬಹುದಾದ ಅಂಥ ಷರತ್ತುಗಳು ;

(ಇ) 29 ನೇ ಪ್ರಕರಣದ ಅಡಿ ನಿಧಿಯನ್ನು ಬಳಸಬಹುದಾದ ಇತರ ಉದ್ದೇಶಗಳು ;

(ಎಫ್) 31 ನೇ ಪ್ರಕರಣದ ಅಡಿಯಲ್ಲಿ ಮಂಡಲಿಗಾಗಿ ಬಜೆಟ್ ಅಂದಾಜುಗಳನ್ನು ತಯಾರಿಸುವುದು ;

(ಜಿ) ಮಂಡಲಿಯ ಲೆಕ್ಕಪತ್ರಗಳು, ದಾಖಲೆಗಳು ಮತ್ತು ದಸ್ತಾವೇಜುಗಳ ನಿರ್ವಹಣೆ ಮತ್ತು ಅಭಿರಕ್ಷೆ ;

(ಹೆಚ್) ನಿಯಮಿಸುವುದು ಅಗತ್ಯವಾಗಿರುವ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

(3) ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದು ರಚಿಸಿದ ಆನಂತರ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಇರಿಸತಕ್ಕದ್ದು ಮತ್ತು ಅದನ್ನು ಇರಿಸಲಾದ ಅಧಿವೇಶನವು ಅಥವಾ ಅದರ ನಿಕಟ ತರುವಾಯದ ಅಧಿವೇಶನಗಳು ಮುಗಿಯುವ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮಗಳನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದರೆ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಸಿಂಧುತ್ವಕ್ಕೆ ಪ್ರತಿಕೂಲವಾಗಿರತಕ್ಕದ್ದಲ್ಲ.

**39. ತೊಂದರೆಗಳನ್ನು ನಿವಾರಿಸುವ ಅಧಿಕಾರ.-** ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಜ್ಯ ಸರ್ಕಾರವು ಆ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಅವಶ್ಯವೆಂದು ತನಗೆ ತೋರಬಹುದಾದಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಆದೇಶವನ್ನು ಮಾಡಬಹುದು:

ಪರಂತು, ಗೊತ್ತುಪಡಿಸಿದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ನಂತರ ಅಂಥ ಯಾವ ಆದೇಶವನ್ನು ಮಾಡತಕ್ಕದ್ದಲ್ಲ.

**40. ಭೂ ಆರ್ಜನೆ ಅಧಿನಿಯಮ, 1894 ರ ಅಡಿಯಲ್ಲಿನ ವ್ಯವಹರಣೆಗಳನ್ನು ಕೊನೆಗೊಳಿಸುವುದು.-** ಗೊತ್ತುಪಡಿಸಿದ ದಿನಾಂಕದಂದು ಮತ್ತು ಆ ದಿನಾಂಕದಿಂದ ಅರಮನೆಗೆ ಸಂಬಂಧಿಸಿದಂತೆ ಭೂ ಆರ್ಜನೆ ಅಧಿನಿಯಮ, 1894ರ ಯಾವುವೇ ಉಪಬಂಧಗಳ ಅಡಿಯಲ್ಲಿ ಹೊರಡಿಸಲಾದ ಎಲ್ಲ ಅಧಿಸೂಚನೆಗಳನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅಂಥ ಅಧಿಸೂಚನೆಗನುಸಾರವಾಗಿ ಯಾವುವೇ ವ್ಯವಹರಣೆಗಳನ್ನು ಹೂಡಲಾಗಿದ್ದರೆ ಅವು ಕೊನೆಗೊಳ್ಳತಕ್ಕದ್ದು.

**ಅನುಸೂಚಿ I**

| | | ಎಲ್ಲೆಗಳು | | | | ಅಂದಾಜುವಿಸ್ತೀರ್ಣ |
|---|---|---|---|---|---|---|
| ಸರ್ವೆ ಸಂಖ್ಯೆ | ಮಾದರಿ | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | ಎಕರೆ ಗುಂಟೆ |
| 1 | 2 | 3 | 4 | 5 | 6 | 7 |
| 1.ರಾಜಮಹಲ್ ವಿಲಾಸ್, ಬೆಂಗಳೂರು | ಖಾಲಿ ಜಮೀನು ಮತ್ತು ಕಟ್ಟಡ | ಜಮೀನು ರಸ್ತೆ ಜಯಮಹಲ್ | ಬಳ್ಳಾರಿ ರಸ್ತೆ | ಮೇಕ್ರಿ ವೃತ್ತ ಮತ್ತು ರಸ್ತೆ | ಬೆಂಗಳೂರು ಮದ್ರಾಸ್ ರೈಲ್ವೆ ಲೈನ್ ಮತ್ತು ಕಾರ್ಪೋರೇಷನ್ ರಸ್ತೆ | 472-16 |

**ಅನುಸೂಚಿ II**

(16, 17, 18 ಮತ್ತು 19 ನೇ ಪ್ರಕರಣಗಳನ್ನು ನೋಡಿ)

ಅರಮನೆಗೆ ಸಂಬಂಧಪಟ್ಟಂತೆ ಹೊಣೆಗಾರಿಕೆಗಳ ನಿವಾರಣೆಗಾಗಿ ಆದ್ಯತೆಗಳ ಕ್ರಮ.

**ಪ್ರವರ್ಗ I**

ಈ ಕೆಳಗೆ ತಿಳಿಸಿರುವವುಗಳಿಂದ ಜಾಮೀನು ಸಹಿತ ಮುಂಗಡವಾಗಿ ಪಡೆದ ಸಾಲಗಳ ಅಸಲು ಮೊಬಲಗು: -

(i) ಕೇಂದ್ರ ಸರ್ಕಾರ;

(ii) ರಾಜ್ಯ ಸರ್ಕಾರ;

(iii) ಬ್ಯಾಂಕುಗಳು;

(iv) ಸಾರ್ವಜನಿಕ ಹಣಕಾಸು ಸಂಸ್ಥೆಗಳು;

(v) ಇತರರು.

**ಪ್ರವರ್ಗ II**

ಈ ಕೆಳಗೆ ತಿಳಿಸಿರುವವುಗಳಿಂದ ಜಾಮೀನು ರಹಿತವಾಗಿ ಮುಂಗಡವಾಗಿ ಪಡೆದ ಸಾಲಗಳ ಅಸಲು ಮೊಬಲಗು:-

(i) ಕೇಂದ್ರ ಸರ್ಕಾರ;

(ii) ರಾಜ್ಯ ಸರ್ಕಾರ;

(iii) ಬ್ಯಾಂಕುಗಳು;

(iv) ಸಾರ್ವಜನಿಕ ಹಣಕಾಸು ಸಂಸ್ಥೆಗಳು.

**ಪ್ರವರ್ಗ III**

(ಎ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ಅಥವಾ ಸರಕುಗಳು ಸರಬರಾಜು ಅಥವಾ ಸೇವೆಗಳಿಗಾಗಿ ರಾಜ್ಯ ಸರ್ಕಾರ ಅಥವಾ ಅರೆ ಸರ್ಕಾರದ ಇತರ ಸಂಸ್ಥೆಗಳಿಗೆ ಸಂದಾಯ ಮಾಡಬೇಕಾದ ಯಾವುದೇ ಬಾಕಿಗಳು.

(ಬಿ) I ಅಥವಾ II ನೇ ಪ್ರವರ್ಗದ ಅಡಿಯಲ್ಲಿ ಬರುವ ಸಾಲಗಳ ಮತ್ತು ಮುಂಗಡಗಳ ಮೇಲಿನ ಬಡ್ಡಿಯ ಬಾಕಿಗಳು ಮತ್ತು ಇತರೆ ಬಾಕಿಗಳು.

**ಪ್ರವರ್ಗ IV**

(ಎ) ಕೇಂದ್ರ ಅಥವಾ ರಾಜ್ಯ ಸರ್ಕಾರಕ್ಕೆ ಮತ್ತು ಸ್ಥಳೀಯ ಪ್ರಾಧಿಕಾರಗಳಿಗೆ ಬಾಕಿ ಇರುವ ಕಂದಾಯ, ತೆರಿಗೆಗಳು, ಉಪಕರಗಳು, ದರಗಳು ಅಥವಾ ಇತರೆ ಬಾಕಿಗಳು ; ಮತ್ತು

(ಬಿ) ಇತರ ಯಾವುವೇ ಸಾಲಗಳು ಅಥವಾ ಬಾಕಿಗಳು.

**ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996ನ್ನು ಈ ಕೆಳಕಂಡ ಅಧಿನಿಯಮಗಳ ಮೂಲಕ ತಿದ್ದುಪಡಿ ಮಾಡಲಾಗಿದೆ. ಅವುಗಳೆಂದರೆ,–**

**ತಿದ್ದುಪಡಿಗಳು (ಕಾಲಾನುಕ್ರಮ)**

| ಕ್ರಮ ಸಂಖ್ಯೆ | ಅಧಿನಿಯಮದ ಸಂಖ್ಯೆ ಮತ್ತು ವರ್ಷ | ತಿದ್ದುಪಡಿಯಾದ ಪ್ರಕರಣಗಳು | ಷರಾ |
|---|---|---|---|
| 1 | 1999ರ ಕರ್ನಾಟಕ ಅಧಿನಿಯಮ ಸಂಖ್ಯೆ:18 | – | – |

**ತಿದ್ದುಪಡಿಗಳು (ಪ್ರಕರಣವಾರು)**

| ಪ್ರಕರಣಗಳು | ಅಧಿನಿಯಮದ ಸಂಖ್ಯೆ ಮತ್ತು ವರ್ಷ | ಷರಾ |
|---|---|---|
| – | – | – |

* * * *

**ಅಧಿಸೂಚನೆ**

**ಬೆಂಗಳೂರು, ದಿನಾಂಕ 21 ನೇ ನವೆಂಬರ್ 1996.[ಸಂಖ್ಯೆ : ಸಿಆಸುಇ 37 ಪಿಎಸ್‌ಆರ್ 86 (ಪಿ–2)]**

ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1996 (1996ರ ಕರ್ನಾಟಕ ಅಧಿನಿಯಮ ಸಂಖ್ಯೆ 18) ಪ್ರಕರಣ 1 ರ ಉಪಪ್ರಕರಣ (2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರಕಾರವು ಈ ಮೂಲಕ ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು 21 ನೇ ನವೆಂಬರ್ 1996 ರಂದು ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಎಲ್.ಕೆ. ಅತೀಕ)
ಸರ್ಕಾರದ ಉಪ ಕಾರ್ಯದರ್ಶಿಗಳು
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ (ಸೇವೆಗಳು)

* * * *